ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ




ಭಾನುವಾರ ಲಖೌನ್ ಸೂಪರ್ ಜೈಂಟ್ಸ್ ವಿರುದ್ಧ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ 7 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿದೆ.

20 ಏಪ್ರಿಲ್ 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 41 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಏಳು ಸಲ ಸಿಡಿಲು ಹೊಡೆದರೂ ಬದುಕುಳಿದ ! » 2


ದೊಡ್ಡ ಕಾಡನೂರು ಉಪ ಪೊಲೀಸ್ ಠಾಣೆಗೆ ಬೀಗ » 3


ಇಷ್ಟಾರ್ಥ ನೆರವೇರಿಸುವ ಕೆಂಚಾಂಬಿಕ ದೊಡ್ಡ ಜಾತ್ರೆ » 4

# ಅಮೇರಿಕಾ-ಇರಾನ್ ನಡುವೆ ಮತ್ತೆ ಸಂಧಾನ ಯತ್ನ

• ಪ್ರಜೋದಯ ವರದಿ

**ನವದೆಹಲಿ:** ಕದನ ವಿರಾಮದ ನಡುವೆಯೂ ಅಮೇರಿಕಾ-ಇರಾನ್ ನಡುವಿನ ಸಂಘರ್ಷ ಮುಂದುವರಿದಿದ್ದು ಸಂಧಾನ ಮಾತುಕತೆಗೆ ಮತ್ತೊಂದು ವೇದಿಕೆ ಸಜ್ಜಾಗಿದೆ.

ಈ ಕುರಿತು ಹೇಳಿಕೆ ನೀಡಿರುವ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಇರಾನ್ ಜೊತೆಗೆ ಶಾಂತಿ ಮಾತುಕತೆಗಾಗಿ ಅಮೇರಿಕಾ ಅಧಿಕಾರಿಗಳು ಇಸ್ಲಾಮಾಬಾದ್‌ಗೆ ತೆರಳಲಿದ್ದಾರೆ. ನಾವು ಅತ್ಯಂತ ನ್ಯಾಯಯುತ, ಸಮಂಜಸವಾದ ವಾದವನ್ನು ಮುಂದಿಡಲಿದ್ದೇವೆ. ಅವರು ಒಪ್ಪುತ್ತಾರೆಂದು ಭಾವಿಸಿದ್ದೇವೆ. ಒಂದು ವೇಳೆ ಒಪ್ಪದಿದ್ದರೆ ಇರಾನ್‌ನಲ್ಲಿರುವ ಪ್ರತಿಯೊಂದು ವಿದ್ಯುತ್ ಸ್ಥಾವರ, ಸೇತುವೆಯನ್ನು ಅಮೇರಿಕಾ ಧ್ವಂಸಗೊಳಿಸಲಿದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

**ವಿಜಯ ಘೋಷಿಸಿದ ಇರಾನ್**

ಅಮೇರಿಕಾ ಮತ್ತು ಇರಾನ್ ನಡುವೆ ಎರಡು ವಾರಗಳ ಕಾಲ ಕದನ ವಿರಾಮ ಒಪ್ಪಂದವಾಗಿದ್ದು, ಈ ನಡುವೆ ಅಮೇರಿಕಾ ವಿರುದ್ಧದ ಯುದ್ಧದಲ್ಲಿ ವಿಜಯಶಾಲಿಯಾಗಿದ್ದೇವೆಂದು ಇರಾನ್ ಹೇಳಿಕೊಂಡಿದೆ.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಅವರು ಈ ಕುರಿತು ಹೇಳಿಕೆ ನೀಡಿದ್ದು, ಯುದ್ಧದ ನಂತರ ಅಮೇರಿಕಾ ತನ್ನ ಗುರಿಗಳನ್ನು ಸಾಧಿಸಲು ವಿಫಲವಾಗಿದೆ. ಇರಾನ್ ತನ್ನ ತಾಕತ್ತು ಪ್ರದರ್ಶಿಸಿದೆ ಎಂದು ಹೇಳಿದ್ದಾರೆ.



ಅಮೇರಿಕಾ ಒತ್ತಡದ ನಡುವೆಯೂ ಇರಾನ್ ತನ್ನ ಪ್ರಮುಖ ಬೇಡಿಕೆಗಳನ್ನು ಒಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇದೇ ಕಾರಣದಿಂದಾಗಿ ತಾತ್ಕಾಲಿಕ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿದ್ದೇವೆಂದು ತಿಳಿಸಿದ್ದಾರೆ.

ಶತ್ರುವು ತನ್ನ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗದಿದ್ದಾಗ ಅದು ಅವರ ಸೋಲನ್ನು ಸೂಚಿಸುತ್ತದೆ. ಅವರು ನಮ್ಮ ಬೇಡಿಕೆಗಳನ್ನು ಒಪ್ಪಿಕೊಂಡದ್ದರಿಂದಲೇ ನಾವು ಕದನ ವಿರಾಮಕ್ಕೆ ಸಹಮತ ಸೂಚಿಸಿದ್ದೇವೆ. ಅಮೇರಿಕಾವು ಎರಡರಿಂದ ಮೂರು ದಿನಗಳಲ್ಲಿ ಇರಾನ್ ಅನ್ನು ಮಣಿಸುವ ಗುರಿ ಹೊಂದಿತ್ತು. ಆದರೆ 40 ದಿನಗಳ ಯುದ್ಧದ ನಂತರವೂ ಇರಾನ್ ಅಚಲವಾಗಿ ನಿಂತಿದೆ. ಅಮೇರಿಕಾದ ಅತ್ಯಾಧುನಿಕ -35 ವಿಮಾನವನ್ನು ಹೊಡೆದುರುಳಿಸಿರುವುದು ಸಣ್ಣ ವಿಷಯವಲ್ಲ. ಇರಾನ್ ತನ್ನ ಮಿಲಿಟರಿ ಸಾಮರ್ಥ್ಯವನ್ನು ಇಡೀ ವಿಶ್ವಕ್ಕೆ ತೋರಿಸಿದೆ ಎಂದು ಅವರು ಹೇಳಿದ್ದಾರೆ.

ಇದೇ ವೇಳೆ ಹೊರ್ಮುಜ್ ಜಲ ಸಂಧಿಯು ಇರಾನ್ ನಿಯಂತ್ರಣದಲ್ಲಿದೆ ಎಂದು ಪುನರುಚ್ಚರಿಸಿರುವ ಅವರು, ಅಮೇರಿಕಾದ ನೌಕಾ ದಿಗ್ಬಂಧನವನ್ನು ಮೂರ್ಖತನದ ನಿರ್ಧಾರ. ಅಲ್ಲದೆ, ಇರಾನ್‌ನ ಹಡಗುಗಳಿಗೆ ಮುಕ್ತ ಅವಕಾಶ ನೀಡದಿದ್ದರೆ ಈ ಜಲಸಂಧಿಯಲ್ಲಿ ಇತರರ ಸಂಚಾರವನ್ನು ನಿರ್ಬಂಧಿಸಲಾಗುವುದು ಎಂದೂ ಎಚ್ಚರಿಕೆ ನೀಡಿದ್ದಾರೆ.

ಈ ನಡುವೆ, ಎರಡು ವಾರಗಳಿಂದ ಜಾರಿಯಲ್ಲಿದ್ದ ಕದನ ವಿರಾಮ ಬುಧವಾರ ಅಂತ್ಯಗೊಳ್ಳುವ ಸಾಧ್ಯತೆ ಇದ್ದು, ಅದನ್ನು ಮುಂದುವರಿಸುವ ಬಗ್ಗೆ ಉಭಯ ರಾಷ್ಟ್ರಗಳು ಇನ್ನೂ ಅಂತಿಮ ನಿರ್ಧಾರ ಕೈಗೊಂಡಿಲ್ಲ. ಶಾಶ್ವತ ಶಾಂತಿ ಒಪ್ಪಂದದ ಬಗ್ಗೆ ಮಾತುಕತೆಗಳು ಮುಂದುವರಿದರೂ, ಪ್ರಮುಖ ವಿಚಾರಗಳಲ್ಲಿ ಇನ್ನೂ ಭಿನ್ನಾಭಿಪ್ರಾಯಗಳಿವೆ ಎಂದು ತಿಳಿದುಬಂದಿದೆ.

ಉಭಯ ರಾಷ್ಟ್ರಗಳ ಶಾಂತಿಯುತ ಮಾತುಕತೆಗಳ ಭಾಗವಾಗಿ ಇಸ್ಲಾಮಾಬಾದ್‌ನಲ್ಲಿ ಇರಾನ್ ಪ್ರತಿನಿಧಿಗಳು ಮತ್ತು ಅಮೇರಿಕಾ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ನಡುವೆ ಏ. 11ರಂದು ಉನ್ನತ ಮಟ್ಟದ ಚರ್ಚೆಗಳು ನಡೆದಿದ್ದವು. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಇದೇ ಮೊದಲ ಬಾರಿಗೆ ಈ ಮಟ್ಟದ ನೇರ ಸಂಪರ್ಕಗಳು ನಡೆದಿರುವುದು ಗಮನಾರ್ಹವಾಗಿದೆ.

ಯುದ್ಧದ ತೀವ್ರತೆ ತಾತ್ಕಾಲಿಕವಾಗಿ ಕಡಿಮೆಯಾದರೂ ಶಾಶ್ವತ ಶಾಂತಿ ಒಪ್ಪಂದದ ದಿಕ್ಕಿನಲ್ಲಿ ಇನ್ನೂ ಅನಿಶ್ಚಿತತೆ ಮುಂದುವರಿದಿದೆ. ಮಧ್ಯವರ್ತಿಗಳಾಗಿ ಪಾಕಿಸ್ತಾನ ಸೇರಿ ಹಲವು ರಾಷ್ಟ್ರಗಳು ಪ್ರಯತ್ನಿಸುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಪರಿಸ್ಥಿತಿ ಯಾವ ದಿಕ್ಕಿಗೆ ಸಾಗುತ್ತದೆ ಎಂಬುದರ ಕಡೆಗೆ ಕುತೂಹಲ ಮೂಡಿದೆ.

## ಗಣ್ಯರ ಸ್ವಾಗತಕ್ಕೆ ಪಾಕ್ ತಯಾರಿ

ಅಮೇರಿಕಾ ಮತ್ತು ಇರಾನ್ ನಡುವಿನ ಎರಡನೇ ಸುತ್ತಿನ ಮಾತುಕತೆ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಹೊರ ಬೀಳದಿದ್ದರೂ, ವಿದೇಶಿ ಗಣ್ಯರ ಆಗಮನಕ್ಕೆ ಪಾಕಿಸ್ತಾನದಲ್ಲಿ ಎಲ್ಲಾ ರೀತಿಯ ಸಿದ್ಧತೆ ನಡೆಯುತ್ತಿದೆ ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ.

ಸಂಘರ್ಷವನ್ನು ಕೊನೆಗೊಳಿಸಿ ಶಾಂತಿ ಒಪ್ಪಂದ ಮಾಡಿಕೊಳ್ಳುವ ಉದ್ದೇಶದಿಂದ ಏ. 11 ಮತ್ತು ಏ.12ರಂದು ಅಮೇರಿಕಾ ಮತ್ತು ಇರಾನ್ ನಡುವೆ ಇಸ್ಲಾಮಾಬಾದ್‌ದಲ್ಲಿ ಮೊದಲ ಸುತ್ತಿನ ಮಾತುಕತೆ ನಡೆದಿತ್ತು. ಆದರೆ, ಶಾಂತಿ ಒಪ್ಪಂದ ಬರುವುದಕ್ಕೆ ಉಭಯ ದೇಶಗಳು ನಾಯಕರು ವಿಫಲವಾಗಿದ್ದರು.ಯುದ್ಧ ಕೊನೆಗೊಳಿಸಲು ಪಣತೊಟ್ಟಿರುವ ಪಾಕಿಸ್ತಾನವು, ಅಮೇರಿಕಾ ಮತ್ತು ಇರಾನ್ ನಡುವೆ ಎರಡನೇ ಸುತ್ತಿನ ಮಾತುಕತೆ ನಡೆಸಲು ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಿದೆ. ಪಾಕ್ ಪ್ರಧಾನಿ ಶೆಹಬಾಜ್ ಶರೀಫ್ ಅವರು ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿಗೆ ಭೇಟಿ ನೀಡಿದ್ದರೆ, ರಕ್ಷಣಾ ಪಡೆಗಳ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಂ ಮುನೀರ್ ಅವರು ಇರಾನ್‌ಗೆ ಮೂರು ದಿನಗಳ ಪ್ರವಾಸ ಕೈಗೊಂಡಿದ್ದರು.

## ಕಾಡಾನೆಗೆ ರೇಡಿಯೋ ಕಾಲರ್ ಅಳವಡಿಕೆ



• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಬಾಸುರದಲ್ಲಿ ಓಡಾಡಿಕೊಂಡಿದ್ದ ಕಾಡಾನೆಯೊಂದಕ್ಕೆ ಭಾನುವಾರ ರೆಡಿಯೋ ಕಾಲರ್ ಅಳವಡಿಸಲಾಯಿತು.

ಹೋಬಳಿ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ಮಿತಿ ಮೀರಿರುವ ಹಿನ್ನಲೆಯಲ್ಲಿ ರೇಡಿಯೋ ಕಾಲರ್ ಅಳವಡಿಸುವ ಕಾರ್ಯ ಕೈಗೊಳ್ಳಲಾಗಿದೆ. ಬೀಟಮ್ಮ-2ರ ಗುಂಪಿನ ಲ್ಲಿದ್ದ ಒಂದು ಕಾಡಾನೆಗೆ ಅಳವಡಿಸಲಾಗಿದ್ದ ರೇಡಿಯೋ ಕಾಲರ್ ಬ್ಯಾಟರಿ ಪ್ರಮಾಣ ಕ್ಷೀಣಿಸಿತ್ತು. ಈ ಹಿನ್ನಲೆಯಲ್ಲಿ 6 ಕುಮ್ಕಿ ಆನೆಗಳ ಸಹಾಯದಿಂದ ಬಾಸುರದಲ್ಲಿ ಕಾಡಾನೆಯನ್ನು ಟ್ರ್ಯಾಕ್ ಮಾಡಲಾಯಿತು. ಬಳಿಕ ವೈದ್ಯಾಧಿಕಾರಿಗಳು ಡಾಟ್ ಮಾಡಿದರು. ರೇಡಿಯೋ ಕಾಲರ್ ಅನ್ನು ಕಾಡಾನೆಗೆ ಅಳವಡಿಸಿ ಅಲ್ಲಿಯೇ ಬಿಡಲಾಯಿತು.

**ಡಾಟ್‌ಗೆ ಸಿಗದ ಮತ್ತೊಂದು ಕಾಡಾನೆ**

ಒಂದು ಕಾಡಾನೆಗೆ ರೇಡಿಯೋ ಕಾಲರ್ ಯಶಸ್ವಿಯಾಗಿ ಅಳವಡಿಸಿದ ಬಳಿಕ 20 ಆನೆಗಳಿರುವ ಡಿಸ್ಪ್ಯಾಚ್ಡ್ ಹರ್ಡ್‌ನಲ್ಲಿರುವ ಒಂದು ಕಾಡಾನೆಗೆ ರೇಡಿಯೋ ಕಾಲರ್ ಅಳವಡಿಸಲು ಯೋಜನೆ ರೂಪಿಸಿಕೊಂಡು ಕಾನಹಳ್ಳಿ ಅರಣ್ಯ ಪ್ರದೇಶಕ್ಕೆ ನುರಿತ ಅನುಭವಿಗಳ ತಂಡ ತೆರಳಿತ್ತು. ಸಂಜೆಯಾದರೂ ಡಾಟ್‌ಗೆ ಸಿಗಲಿಲ್ಲ. ಸಂಜೆ ಬಳಿಕ ಕಾರ್ಯಾಚರಣೆ ಸ್ಥಗಿತಗೊಳಿಸಲಾಯಿತು.

ಡಿಎಫ್‌ಒ ಸೌರಭ್ ಕುಮಾರ್, ಎಸಿಎಫ್ (ಇಟಿಎಫ್) ಉಮಾಪತಿ, ಆರ್‌ಎಫ್‌ಒ ಯತೀಶ್, ಹಾಸನ, ಹೊಳೆನರಸೀಪುರ ಹಾಗು ಚನ್ನರಾಯಪಟ್ಟಣ ವಲಯಾರಣ್ಯಾಧಿಕಾರಿಗಳು, ಸಿಬ್ಬಂದಿ ಇದ್ದರು.

## ಜಮೀನಿಗೆ ತೆರಳುವ ರಸ್ತೆಗೆ ವಿನಾಕಾರಣ ಅಡ್ಡಿ: ಆರೋಪ

• ಪ್ರಜೋದಯ ವರದಿ

**ಅರೇಹಳ್ಳಿ:** ಜಮೀನಿಗೆ ತೆರಳಲು ಅನುಕೂಲವಾಗಲೆಂದು ತಹಶೀಲ್ದಾರ್ ಆದೇಶದ ಮೇರೆಗೆ ರಸ್ತೆ ನಿರ್ಮಿಸಿಕೊಂಡಿದ್ದರೂ ಇಲ್ಲಸಲ್ಲದ ಆರೋಪ ಮಾಡಿ ರಸ್ತೆ ಬಂದ್ ಮಾಡಲು ಪ್ರಯತ್ನ ನಡೆಸಿದ್ದಾರೆಂದು ಚಿಕ್ಕಸಾಲಾವರ ಗ್ರಾಮಸ್ಥರು ಆರೋಪಿಸಿದ್ದಾರೆ.



ಗ್ರಾಮದ ಭರತ್ ಅವರು ಮಾತನಾಡಿ, ಜಮೀನಿಗೆ ತೆರಳಲು ರಸ್ತೆಯ ಅಗತ್ಯವಿದೆ ಎಂದು ತಹಶೀಲ್ದಾರ್‌ಗೆ ಮನವಿ ಸಲ್ಲಿಸಲಾಗಿತ್ತು. ಗ್ರಾಮ ಲೆಕ್ಕಾಧಿಕಾರಿ, ಸಿಬ್ಬಂದಿ ಉಪಸ್ಥಿತಿಯಲ್ಲಿಯೇ ಸ್ಥಳ ಗುರುತು ಮಾಡಿ ಆ ಬಳಿಕ ಸ್ವಂತ ಖರ್ಚಿನಲ್ಲಿ ರಸ್ತೆ ನಿರ್ಮಾಣ ಮಾಡಿಕೊಂಡಿದ್ದೆವು. ಆದರೆ, ರಸ್ತೆ ನಿರ್ಮಾಣದಿಂದ ಕೆಲವರು ವಿವಾದ ಸೃಷ್ಟಿಸುತ್ತಿದ್ದಾರೆ. ರಸ್ತೆಗೆ ತೆರಳುವ ಮಾರ್ಗದಲ್ಲಿ ರೇವತಿ ಹಾಗು ಹರೀಶ್ ಎಂಬುವವರ ಮನೆ ಇದೆ. ಹರೀಶ್ ಅವರ ಒಪ್ಪಿಗೆ ಪಡೆದು ರಸ್ತೆಯನ್ನು ನಿರ್ಮಿಸಲಾಗಿದೆ. ಈಗ ಹರೀಶ್ ಹಾಗು ರೇವತಿ ದಂಪತಿ ರಸ್ತೆ ನಿರ್ಮಾಣ ಪೂರ್ಣಗೊಂಡಿದ್ದರೂ ಸಹ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ತಮಗೆ ಜೀವ ಬೆದರಿಕೆ ಇದೆ ಎಂದು ನಮ್ಮ ಮೇಲೆ ವಿನಾಕಾರಣ ಸುಳ್ಳು ಆರೋಪ ಮಾಡುತ್ತಿದ್ದಾರೆ. ಸರ್ವೆ ನಂ. 24, 23, 25, 16 ಸೇರಿ ಇತರ ಹಿಡುವಳಿ ಜಮೀನಿಗೆ ತೆರಳಲು ಈ ರಸ್ತೆಯೇ ಆಧಾರವಾಗಿದೆ. ಈಗ ಜಮೀನಿಗೆ ತೆರಳದಂತೆ ಮೋರಿಯನ್ನು ಕಿತ್ತು ಹಾಕಿದ್ದಾರೆ. ತಿರುಗಾಡುವ ರಸ್ತೆಗೆ ತೊಂದರೆ ಮಾಡುತ್ತಿರುವವರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

» ನಾಲ್ಕನೇ ಪುಟದಲ್ಲಿ

## 2027ಕ್ಕೆ ಮಲೇರಿಯಾ ಮುಕ್ತ ಜಿಲ್ಲೆ ಗುರಿ: ತಂಡ ಪರಿಶೀಲನೆ

**ಹಾಸನ:** ಜಿಲ್ಲೆಯಲ್ಲಿ 2027ರ ವೇಳೆಗೆ ಮಲೇರಿಯಾ ನಿರ್ಮೂಲನೆ ಗುರಿ ಹೊಂದಲಾಗಿದ್ದು, ಈ ನಿಟ್ಟಿನಲ್ಲಿ ಜಿಲ್ಲಾದ್ಯಂತ ನಡೆಯುತ್ತಿರುವ ಮಲೇರಿಯಾ ನಿಯಂತ್ರಣ ಕಾರ್ಯಕ್ರಮಗಳನ್ನು ಪರಿಶೀಲಿಸಲು ಕೇಂದ್ರ ಹಾಗು ರಾಜ್ಯ ಸರ್ಕಾರದಿಂದ ತಂಡ ಆಗಮಿಸಿತ್ತು.

ವಿವಿಧ ಆರೋಗ್ಯ ಕೇಂದ್ರ ಹಾಗು ಆಸ್ಪತ್ರೆಗಳಿಗೆ ಭೇಟಿ ನೀಡಿ ಮಲೇರಿಯಾ ರೋಗ ಪತ್ತೆ, ಚಿಕಿತ್ಸೆ ಹಾಗು ರೋಗ ಹರಡದಂತೆ ಕೈಗೊಂಡ ಕ್ರಮಗಳ ಮಾಹಿತಿ ಪಡೆದಿದೆ. 2021 ರಿಂದ ಇಲ್ಲಿವರೆಗೆ ಸ್ಥಳೀಯವಾಗಿ ಹರಡಿರುವ ಮಲೇರಿಯಾ ಪ್ರಕರಣಗಳು ಜಿಲ್ಲೆಯಲ್ಲಿ ಕಂಡು ಬಂದಿಲ್ಲ. ವರದಿಯಾದ ಎಲ್ಲಾ ಪ್ರಕರಣಗಳು ಬೇರೆ ಮಲೇರಿಯಾ ಪೀಡಿತ ಜಿಲ್ಲೆ ಅಥವಾ ರಾಜ್ಯಗಳಿಂದ ಮಲೇರಿಯಾ ರೋಗ ತಗುಲಿಸಿಕೊಂಡು ಬಂದಿರುವವರಾಗಿರುತ್ತಾರೆ. ಜಿಲ್ಲೆಯನ್ನು ಮಲೇರಿಯಾ ಮುಕ್ತವಾಗಿರಿಸಲು ಹಾಗು ಮಲೇರಿಯಾ ನಿವಾರಣಾ ಗುರಿ ತಲುಪಲು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳನ್ನು ಈಗಾಗಲೇ ಇಲಾಖೆಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಕೈಗೊಳ್ಳಲಾಗಿದೆ.



ಭೋಪಾಲ್‌ನ ಹಿರಿಯ ಪ್ರಾದೇಶಿಕ ನಿರ್ದೇಶಕ ಡಾ|| ಚಂದ್ರಶೇಖರ್, ವಲಯ ಸಹ ಸಂಯೋಜಕ ಡಾ|| ಸೇಜಲ್, ನವದೆಹಲಿ ಎನ್‌ವಿಬಿಡಿಸಿಪಿ ಡಾ|| ನೀಲಂ, ರಾಜ್ಯ ಕಾರ್ಯಕ್ರಮ ಅಧಿಕಾರಿ ಡಾ|| ಹರ್ಷದೀಪ್ ಕೌರ್ ಅವರನ್ನು ಒಳಗೊಂಡ ತಂಡವು ಏ. 15ರಿಂದ 18ರ ವರೆಗೆ ಜಿಲ್ಲೆಯ ವಿವಿಧೆಡೆ ಎಲ್ಲಾ ಹಂತದ ಜಿಲ್ಲಾಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಅದರ ವ್ಯಾಪ್ತಿಗೆ ಬರುವಂತಹ ಉಪಕೇಂದ್ರಗಳಲ್ಲಿ ಹಾಗು ಜಿಲ್ಲಾ ಮಟ್ಟದಿಂದ ಕೈಗೊಂಡಿರುವ ಮಲೇರಿಯಾ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡಿ ಹಾಗು ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಕ್ಷೇತ್ರ ಸಿಬ್ಬಂದಿ ವರದಿ ಹಾಗು ಆಶಾ ಕಾರ್ಯಕರ್ತೆಯರ ಕಾರ್ಯ ಕ್ಷಮತೆ ಮತ್ತು ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವ ಪ್ರಯೋಗ ಶಾಲೆಗಳ ಮೇಲ್ವಿಚಾರಣೆ ಮತ್ತು ದಾಖಲಾತಿ ನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಿದೆ.

ಜಿಲ್ಲೆಗೆ ಆಮದು ಆಗಿರುವ ಮಲೇರಿಯಾ ಪ್ರಕರಣಗಳು ವರದಿಯಾಗಿರುವ ಗ್ರಾಮ ಭೇಟಿ ಮತ್ತು ಪ್ರಕರಣದ ಮನೆ ಭೇಟಿ ನಡೆಸಿರುತ್ತಾರೆ. ಮಲೇರಿಯಾ ದಾಸ್ತಾನು ನಿರ್ವಹಣೆಯ ದಾಖಲಾತಿಗಳ

» ನಾಲ್ಕನೇ ಪುಟದಲ್ಲಿ

## ಕಾಂಗ್ರೆಸ್ ದೇಶದ ದರಿದ್ರ ಪಕ್ಷ ಎಂದು ಸಾಬೀತು

### ಮಹಿಳಾ ಮೀಸಲಾತಿ ಮಸೂದೆಗೆ ವಿರೋಧ ಸರಿಯಲ್ಲ | ಬಿಜೆಪಿ ರಾಜ್ಯ ವಕ್ತಾರ

• ಪ್ರಜೋದಯ ವರದಿ

**ಹಾಸನ:** ಮಹಿಳಾ ಮೀಸಲಾತಿ ಮಸೂದೆ ಪರಾಭವಗೊಂಡಿದ್ದಕ್ಕೆ ಸಂಭ್ರಮಿಸಿರುವ ಕಾಂಗ್ರೆಸ್ ಹಾಗು ಮಿತ್ರ ಪಕ್ಷಗಳು ದೇಶಕ್ಕೆ ಅಂಟಿದ ದರಿದ್ರ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿವೆ ಎಂದು ಬಿಜೆಪಿ ರಾಜ್ಯ ವಕ್ತಾರ ಹೆಚ್.ಎನ್. ಚಂದ್ರಶೇಖರ್ ಅವರು ಕಿಡಿಕಾರಿದರು.



ನಗರದ ಬಿಜೆಪಿ ಕಚೇರಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನ ಕುತಂತ್ರ ನೀತಿಯನ್ನು ದೇಶದ ಜನರು ದಶಕಗಳಿಂದ ನೋಡಿಕೊಂಡು ಬಂದಿದ್ದಾರೆ. ಲೋಕಸಭೆಯಲ್ಲಿ ಮಸೂದೆಗೆ ವಿರೋಧಿಸುವ ಮೂಲಕ ತಾವು ಮಹಿಳೆಯರ ಏಳಿಗೆ ಸಹಿಸುವುದಿಲ್ಲ ಎಂಬುದನ್ನು ಸಾಬೀತು ಮಾಡಿದ್ದಾರೆ. ಆ ಮೂಲಕ ಕ್ಷೇತ್ರ ಪುನರ್ ವಿಂಗಡಣೆಗೂ ತಮ್ಮ ಸಹಮತವಿಲ್ಲ ಎಂದು ಕಾಂಗ್ರೆಸ್ ಸಂವಿಧಾನದ ಆಶಯಗಳನ್ನೇ ಗಾಳಿಗೆ ತೂರಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನಿ ಮೋದಿ ಅವರು ಕೇವಲ ರಾಜಕೀಯವಾಗಿ ಪಕ್ಷವನ್ನು ದೂರವಿಡಬೇಕೆಂಬ ಕಾರಣದಿಂದ ಕಾಂಗ್ರೆಸ್ ಮುಕ್ತ ಭಾರತದ ಸಂಕಲ್ಪ ತೊಟ್ಟಿಲ್ಲ. ಕಾಂಗ್ರೆಸ್‌ನ ವಿಷಕಾರಿ ಮನಸ್ಥಿತಿಯನ್ನು ದೇಶದಿಂದ ತೊಲಗಿಸಬೇಕೆನ್ನುವುದು ಪ್ರಧಾನಿಯ ಆಶಯವಾಗಿದೆ. ಕಾಂಗ್ರೆಸ್‌ನ ದರಿದ್ರ ಮನಸ್ಥಿತಿಗೆ ಸಾಕಷ್ಟು ನಿದರ್ಶನಗಳಿವೆ. ಒಂದೇ ಕುಟುಂಬದ ಹಿತ ಬಯಸುವುದೇ ಅವರ ಉದ್ದೇಶವಾಗಿದೆ. ದೇಶದ ಮಹಿಳೆಯರಿಗೆ ಕಾಂಗ್ರೆಸ್ ಮಹಾದ್ರೋಹ ಎಸಗಿದೆ. ಹಿಂದೂ ಕೋಡ್ ಬಿಲ್ ತರುವಾಗ ಮುಸ್ಲಿಂ ಮಹಿಳೆಯರಿಗೆ ನ್ಯಾಯ ಕೊಡಿಸ

» ನಾಲ್ಕನೇ ಪುಟದಲ್ಲಿ

## ಕಾವೇರಿ ನದಿಯಲ್ಲಿ ಮುಳುಗಿ 6 ಜನರ ಸಾವು

**ಮೈಸೂರು:** ಕೆ.ಆರ್. ನಗರದ ಅರ್ಕೇಶ್ವರ ದೇಗುಲದ ಬಳಿ ಈಜಲು ಕಾವೇರಿ ನದಿಗೆ ಇಳಿದಿದ್ದ ಆರು ಮಂದಿ ನೀರುಪಾಗಿರುವ ಘಟನೆ ಭಾನುವಾರ ನಡೆದಿದೆ. ಉರೂಸ್ ಹಿನ್ನಲೆಯಲ್ಲಿ ಅರ್ಕೇಶ್ವರ ದೇಗುಲದ ಬಳಿಯಿದ್ದ ದರ್ಗಾಗೆ ಹಲವು ಮುಸ್ಲಿಂ ಕುಟುಂಬಗಳು ಬಂದಿದ್ದವು. ಈ ವೇಳೆ ಈಜಾಡಲು 8 ಮಂದಿ ನದಿಗೆ ಇಳಿದಿದ್ದಾರೆ. ನೀರಿನ ರಭಸಕ್ಕೆ ಸಿಲುಕಿ 6 ಮಂದಿ ಮೃತಪಟ್ಟಿದ್ದಾರೆ. ಮತ್ತಿಬ್ಬರನ್ನು ಸ್ಥಳೀಯರು ರಕ್ಷಿಸಿದ್ದಾರೆ. ಯಾಸಿನ್ (23), ಫಾತಿಮ್ (30), ಹುಮಾಯೂನ್ (7), ನೇಹಾನ್ (19), ಅಲೀಂ (13) ಮೃತಪಟ್ಟಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

## 1.75 ಕೋ.ರೂ. ವೆಚ್ಚದ ವಿವಿಧ ಕಾಮಗಾರಿಗೆ ಭೂಮಿಪೂಜೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 1.75 ಕೋ. ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಮಂಜು ಅವರು ಭಾನುವಾರ ಭೂಮಿಪೂಜೆ ನೆರವೇರಿಸಿದರು.

ಬಿದರೂರು ಗ್ರಾಮದಲ್ಲಿ 65 ಲ.ರೂ. ವೆಚ್ಚದಲ್ಲಿ ನೂತನ ಆರೋಗ್ಯ ಉಪ ಕೇಂದ್ರ ಹಾಗು 30 ಲ.ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ಹೆಗ್ಗಡಿಹಳ್ಳಿ ಗ್ರಾಮದಲ್ಲಿ 65 ಲ.ರೂ. ವೆಚ್ಚದ ಆರೋಗ್ಯ ಉಪ ಕೇಂದ್ರ ಕಟ್ಟಡ ಕಾಮಗಾರಿ ಹಾಗು ಪಾರಸನಹಳ್ಳಿಯಲ್ಲಿ 15 ಲ. ರೂ. ಮೊತ್ತದ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.



ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಆರೋಗ್ಯ ಉಪ ಕೇಂದ್ರಗಳು ಕಾರ್ಯನಿರ್ವಹಿಸಿದರೆ ಸಕಾಲದಲ್ಲಿ ಜನರಿಗೆ ಆರೋಗ್ಯ ಸೇವೆ ದೊರೆಯಲಿದೆ. ಈ ಸಲುವಾಗಿ ಉಪ ಕೇಂದ್ರಗಳಿಗೆ ಒತ್ತು ನೀಡಲಾಗಿದೆ ಎಂದರು.

ಆರು ತಿಂಗಳೊಳಗಾಗಿ ಆಸ್ಪತ್ರೆ ಕಟ್ಟಡ ಹಾಗು ಒಂದು ತಿಂಗಳಲ್ಲಿ ರಸ್ತೆ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ಗುಣಮಟ್ಟದ ಕಾಮಗಾರಿ ನಿರ್ವಹಿಸುವಂತೆ ಗುತ್ತಿಗೆದಾರರು ಮುಂದಾಗಬೇಕಿದೆ ಎಂದು ತಿಳಿಸಿದರು. ಮುಖಂಡರಾದ ತಿಮ್ಮೇಗೌಡ, ಹನುಮೇಗೌಡ, ಪುಟ್ಟರಾಜು ಇತರರಿದ್ದರು.

## ಇಂದು ಬಸವ ಜಯಂತಿ

• ಪ್ರಜೋದಯ ವರದಿ

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಏ.20 ರಂದು ಬೆಳಿಗ್ಗೆ 11.30ಕ್ಕೆ ಬಸವ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ರಾಜ್ಯ ಗೃಹ ಮಂಡಳಿಯ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು. ಸಂಸದ ಶ್ರೇಯಸ್ ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು ಮುಖ್ಯ ಆತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗ ವಹಿಸಲಿದ್ದಾರೆ.

ನಿವೃತ್ತ ಪ್ರಾಂಶುಪಾಲ ಟಿ.ಎಂ. ಶಿವಶಂಕರಪ್ಪ ಅವರು ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಅಂದು ಬೆಳಿಗ್ಗೆ 9.30ಕ್ಕೆ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಬಸವಣ್ಣ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಗುವುದು.

### ಹಾಸನದ ರುಕೀಯ ಇರ್ಷಾದ್‌ಗೆ ಸುವರ್ಣ ಪದಕ | 809 ವಿದ್ಯಾರ್ಥಿಗಳು ಉತ್ತೀರ್ಣ

## ಶ್ರವಣಬೆಳಗೊಳದಲ್ಲಿ 20ನೇ ಪ್ರಾಕೃತ ಘಟಿಕೋತ್ಸವ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಇಲ್ಲಿನ ಜೈನ ಮಠದ ದವಲ ತೀರ್ಥಂ ಆವರಣದಲ್ಲಿ 20ನೇ ಪ್ರಾಕೃತ ಘಟಿಕೋತ್ಸವ ಅರ್ಥಪೂರ್ಣವಾಗಿ ನೆರವೇರಿತು.

ಸ್ವಸ್ತಿ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ನೇತೃತ್ವದಲ್ಲಿ 1993ರಲ್ಲಿ ಅಸ್ತಿತ್ವ ಪಡೆದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯನ್ನು ಪ್ರಸ್ತುತ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದೆ. ಇದುವರೆಗೆ 15 ಪ್ರಶಸ್ತಿಗಳನ್ನು ನೀಡಲಾಗಿದೆ.

ಸ್ವಸ್ತಿ ಶ್ರೀ ಚಾರುಕೀರ್ತಿ ಪಂಡಿತಾಚಾರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಮಾತನಾಡಿ, ಪ್ರಾಕೃತ ಭಾಷೆ ಭಗವಾನ್ ಮಹಾವೀರರ ಕಾಲದ ಜನಸಾಮಾನ್ಯರ ಆಡು ಭಾಷೆಯಾಗಿದೆ. ಈ ಪುರಾತನ ಪ್ರಾಕೃತ ಭಾಷೆಯಲ್ಲಿಯೇ ಎಲ್ಲಾ ಜೈನ ಧಾರ್ಮಿಕ ಅಂಶಗಳು ಅಡಗಿವೆ. ಯುವ ಸಮುದಾಯ ಇತ್ತೀಚೆಗೆ ಪ್ರಾಕೃತ ಭಾಷೆಯ ಅಧ್ಯಯನದಲ್ಲಿ ತೊಡಗುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದರು.

ಕರ್ನಾಟಕದಲ್ಲಿ ಪ್ರಾಕೃತ ವಿಶ್ವವಿದ್ಯಾಲಯದ ರೂಪಿಸಲು ಚಿಂತನೆ ನಡೆದಿದೆ. ಈ ಭಾಷೆಗೆ ಕೇಂದ್ರ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿ ಗೌರವಿಸಿದೆ. ರಾಜ್ಯ ಸರ್ಕಾರವು ಭಾಷೆ ಬೆಳವಣಿಗೆಗೆ ಅಗತ್ಯ ಸಹಕಾರ ನೀಡುತ್ತಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆಯಬೇಕೆಂದರು.




ಭಾರತ ಹೊರತಾಗಿ ಜರ್ಮನಿ, ಜಪಾನ್, ರಷ್ಯಾ, ಅಮೇರಿಕಾ, ಆಸ್ಟ್ರೇಲಿಯಾ, ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ಫಿನ್ಲೆಂಡ್ ಮೊದಲಾದ ದೇಶಗಳಲ್ಲಿ ಜೈನ ವಿದ್ಯೆಯ ವಿವಿಧ ರೂಪಗಳಲ್ಲಿ ಅಧ್ಯಯನ ನಡೆಯುತ್ತಿದೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಜೈನ ವಿದ್ಯೆಗೆ ಸಂಬಂಧಿಸಿದ ವಿಭಾಗಗಳಿದ್ದು, ಜೈನ ವಿದ್ಯೆ ಅಧ್ಯಯನವು ಹೊಸ ವೈಜ್ಞಾನಿಕ ದಿಕ್ಕುಗಳನ್ನು ಪಡೆದುಕೊಳ್ಳುತ್ತಿದೆ. ಜೈನ ವಿದ್ಯೆಯ ಅನುಶೀಲನೆ ಆಧುನಿಕ ಸಂದರ್ಭದಲ್ಲಿ ರಾಷ್ಟ್ರೀಯ ಚರಿತ್ರ ನಿರ್ಮಾಣಕ್ಕೆ ಸಹಾಯಕ ವಾಗಬೇಕು ಮತ್ತು ಪ್ರಾಯೋಗಿಕವಾಗಿರ ಬೇಕು. ಸಂಶೋಧನೆ ಸಂಪ್ರದಾಯ, ಪಂಥ, ಮಂಡಲಗಳಿಂದ ಮುಕ್ತವಾಗಿರಬೇಕು. ಆಗ ಜೈನ ವಿದ್ಯಾ ಕಾರ್ಯವು ಪರಿಣಾಮಕಾರಿ ಯಾಗಿ ನಡೆಯುತ್ತದೆಂದು ಅಭಿಪ್ರಾಯಟ್ಟರು.

**942 ವಿದ್ಯಾರ್ಥಿಗಳ ಪ್ರವೇಶ**

ಈ ಸಂಸ್ಥೆಯಿಂದ ಪ್ರಾಕೃತದ ಪರೀಕ್ಷೆಯನ್ನು ಭಾರತದಾದ್ಯಂತ ಕನ್ನಡ, ಹಿಂದಿ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಪ್ರಾಕೃತ ಪ್ರವೇಶ, ಡಿಪ್ಲೊಮಾ, ಪ್ರಥಮಾ, ಮಧ್ಯಮಾ, ವಿಶಾರದ ಮತ್ತು ರತ್ನ ತರಗತಿಗಳಲ್ಲಿ ಒಟ್ಟು 531 ವಿದ್ಯಾರ್ಥಿಗಳು, ಹಿಂದಿ ಮಾಧ್ಯಮದಲ್ಲಿ 396 ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದಲ್ಲಿ 15 ಒಟ್ಟು ಮೂರು ಮಾಧ್ಯಮಗಳಿಂದ 942 ವಿದ್ಯಾರ್ಥಿಗಳು ಪ್ರಾಕೃತ ಕೋರ್ಸ್‌ನ ವಿವಿಧ ತರಗತಿಗಳಲ್ಲಿ ಅಧ್ಯಯನಕ್ಕೆ ನೊಂದಣಿಯಾಗಿದ್ದಾರೆ. ಈ ಸಾಲಿನಲ್ಲಿ ಕನ್ನಡ ಮಾಧ್ಯಮದಿಂದ ಪರೀಕ್ಷೆಗೆ ಹಾಜರಾಗಿ 478 ಜನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಹಿಂದಿ ಮಾಧ್ಯಮದಿಂದ 318, ಇಂಗ್ಲಿಷ್ 13 ವಿದ್ಯಾರ್ಥಿಗಳು ಸೇರಿ 809 ವಿದ್ಯಾರ್ಥಿಗಳು ಮೂರು ಮಾಧ್ಯಮದಲ್ಲಿ ಉತ್ತೀರ್ಣರಾಗಿದ್ದಾರೆ.

**ಕನ್ನಡ ಮಾಧ್ಯಮ ಪದಕ ವಿಜೇತರು**

ಪ್ರಾಕೃತ ರತ್ನ ತರಗತಿಯಿಂದ ಸುವರ್ಣ ಪದಕವನ್ನು ಹಾಸನದ ರುಕೀಯ ಇರ್ಷಾದ್, ರಜತ ಪದಕವನ್ನು ಬೆಳಗಾವಿಯ ಪ್ರಿಯಕಾರಿಣಿ ಅಭಿನಂದನ ಕೊಚೇರಿ, ಕಂಚಿನ ಪದಕವನ್ನು ಬೆಳಗಾವಿಯ ಭಾರತಿ ಮಹಾವೀರ ಉಪಾಧ್ಯೆ ಪಡೆದರು.

ಪ್ರಾಕೃತ ವಿಶಾರದ ತರಗತಿಯಿಂದ ಸುವರ್ಣ ಪದಕವನ್ನು ಬಾಗಲಕೋಟೆ ಜಿಲ್ಲೆಯ ಅಲಗೂರಿನ ವೃಷಭ ಪರಮಗೊಂಡ, ರಜತ ಪದಕವನ್ನು ಬೆಂಗಳೂರಿನ ಟಿ.ಎಸ್. ಶಾಂತಲ, ಪ್ರಾಕೃತ ಮಧ್ಯಮಾ ತರಗತಿಯಿಂದ ಸುವರ್ಣ ಪದಕವನ್ನು ನರಗುಂದ ಕೇಂದ್ರದ ಕವಿತಾ ವರ್ಧಮಾನ ವಜ್ರಾಂಗಿ, ರಜತ ಪದಕವನ್ನು ಬೆಳಗಾವಿಯ ಅಂಕಿತಾ ವಿಶಾಲ್ ಅನಗೋಳ್‌ಕರ್, ಕಂಚಿನ ಪದಕವನ್ನು ಬಾಗಲಕೋಟೆ ಜಿಲ್ಲೆಯ ಅಲಗೂರಿನ ಸಮ್ಮೇದ ಸು.ಬೆಳಗಲಿ ಪಡೆದಿದ್ದಾರೆ.

ಪ್ರಾಕೃತ ಪ್ರಥಮಾ ತರಗತಿಯಿಂದ ಸುವರ್ಣ ಪದಕವನ್ನು ಪುತ್ತೂರಿನ ಡಾ. ಮೈತ್ರಿ ಭಟ್, ರಜತ ಪದಕವನ್ನು ತುರುವೇಕೆರೆ ತಾಲ್ಲೂಕಿನ ತಂಡಗದ ಟಿ.ಪಿ.ರೂಪಾ, ಕಂಚಿನ ಪದಕವನ್ನು ಬೆಳಗಾವಿಯ ಶ್ರದ್ಧಾ ಪ್ರಸಾದ್ ಪಾಟೀಲ್ ಪಡೆದರು.

ಘಟಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಬಾಹುಬಲಿ ಪ್ರಾಕೃತ ವಿದ್ಯಾಪೀಠ ಕಾರ್ಯಾಧ್ಯಕ್ಷ ಎ.ಸಿ.ವಿದ್ಯಾಧರ್ ವಹಿಸಿದ್ದರು. ನಿಪ್ರಾರ್ ಸಂಸ್ಥೆಯ ನಿರ್ದೇಶಕ ಡಾ. ರಮೇಶ್ ಶಿರಹಟ್ಟಿ ಶಾಸ್ತ್ರಿ ಅವರು ಪ್ರಾಕೃತ ಭಾಷೆಯಲ್ಲಿ ಪ್ರಮಾಣ ವಚನ ಬೋಧಿಸಿದರು. ಪ್ರಾಕೃತ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ. ಎನ್.ಲೋಕಕುಮಾರ್, ಪ್ರಾಕೃತ ಮತ್ತು ಹಿಂದಿ ಭಾಷಾ ವಿಭಾಗದ ಅಧ್ಯಕ್ಷ ಡಾ. ರಾಜೇಂದ್ರ ಪಾಟೀಲ್, ಅಜಿತ್ ಬಿ. ಬಳಿಗಾರ, ಶ್ರುತಿ ಧನುಷ್ ಮತ್ತಿತರರಿದ್ದರು.



## ಮೋದಿ ಗುರಾಣಿಯಾಗಿ ಮಹಿಳೆಯರ ಬಳಕೆ

• ಪ್ರಜೋದಯ ವರದಿ

**ಕೋಲ್ಕತ್ತಾ:** ಮಹಿಳಾ ಮೀಸಲು ಮಸೂದೆಯನ್ನು ಪ್ರಧಾನಿ ದೇಶವನ್ನು ದಾರಿ ತಪ್ಪಿಸಲು ಆಯ್ಕೆ ಮಾಡಿಕೊಂಡಿದ್ದು ತೀವ್ರ ದುರದೃಷ್ಟಕರ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಟೀಕಿಸಿದ್ದಾರೆ.

ಮಹಿಳಾ ಮೀಸಲಾತಿ ಕಾನೂನು ಜಾರಿ ಹೆಸರಿನಲ್ಲಿ ಕ್ಷೇತ್ರ ಪುನರ್ ವಿಂಗಡಣೆ ವಿಚಾರವನ್ನು ಪ್ರಸ್ತಾಪಿಸುವ ಮೂಲಕ ಕೇಂದ್ರ ಸರ್ಕಾರ ಮಹಿಳೆಯರನ್ನು ಗುರಾಣಿಯಂತೆ ಬಳಸಿದೆ ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮಸೂದೆಗೆ ಸೋಲಾಗುತ್ತಿದ್ದಂತೆ ವಾಗ್ದಾಳಿ ನಡೆಸಿದ್ದ ಪ್ರಧಾನಿ, ಭ್ರೂಣ ಹತ್ಯೆಯ ಪಾಪಕ್ಕಾಗಿ ದೇಶದ ಮಹಿಳೆಯರು ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳನ್ನು ಕಠಿಣವಾಗಿ ಶಿಕ್ಷಿಸಲಿದ್ದಾರೆ ಎಂದಿದ್ದರು. ಅದಕ್ಕೆ ತಿರುಗೇಟು ನೀಡಿರುವ ಮಮತಾ, ತೃಣ ಮೂಲ ಕಾಂಗ್ರೆಸ್ ಯಾವತ್ತೂ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕಲ್ಪಿಸುತ್ತಾ ಬಂದಿದೆ. ಲೋಕ ಸಭೆಯಲ್ಲಿ ಟಿಎಂಸಿ ಸದಸ್ಯರಲ್ಲಿ ಮಹಿಳೆ ಯರು ಶೇ.37.9ರಷ್ಟಿದ್ದರೆ, ರಾಜ್ಯಸಭೆ ಯಲ್ಲಿ ಶೇ.46 ರಷ್ಟಿದ್ದಾರೆಂದರು.

# ದೊಡ್ಡ ಕಾಡನೂರು ಉಪ ಪೊಲೀಸ್ ಠಾಣೆಗೆ ಬೀಗ

## ಸಿಬ್ಬಂದಿ ಕೊರತೆಯಿಂದ ಠಾಣೆ ಬಂದ್ | ಪುನಾರಂಭಕ್ಕೆ ಹೆಚ್ಚಿದ ಒತ್ತಡ

• ಪ್ರಜೋದಯ ವರದಿ



**ಹೊಳೆನರಸೀಪುರ:** ತಾಲ್ಲೂಕಿನ ದೊಡ್ಡ ಕಾಡನೂರು ಪೊಲೀಸ್ ಉಪ ಠಾಣೆಯ ಬಾಗಿಲು ಮುಚ್ಚಿ ವರ್ಷಗಳೇ ಕಳೆದಿದ್ದೂ ಸಾರ್ವಜನಿಕರ ದೂರು ಕೇಳಲು ಪೊಲೀಸರೇ ಇಲ್ಲದಂತಾಗಿದೆ.

ಸಾರ್ವಜನಿಕರಿಗೆ ಸಂಭವಿಸುವ ಅವಘಡಗಳು ಹಾಗು ಸಂಚಾರ ಸುರಕ್ಷತಾ ನಿಯಮಗಳನ್ನು ಪಾಲನೆ ಮಾಡಲು ಸುತ್ತಲಿನ ಜನರಿಗೆ ಸದ್ಬಳಕೆಯಾಗಲೆಂದು ಹಾಸನ-ಮೈಸೂರು ಹೆದ್ದಾರಿ ಸುಮಾರು 60 ವರ್ಷಗಳ ಹಿಂದೆ ಪೊಲೀಸ್ ಉಪ ಠಾಣೆಯನ್ನು ತೆರೆಯಲಾಗಿತ್ತು. ಅಭಿವೃದ್ಧಿ ಯಾದಂತೆ ಪ್ರಸ್ತುತ ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಟ್ಟಿದೆ.

ಈ ಉಪ ಠಾಣೆಯನ್ನು ಮೊದಲು ಕಬ್ಬೂರು ಗ್ರಾಮದಲ್ಲಿ ಸ್ಥಾಪಿಸಲಾಗಿತ್ತು. ದೊಡ್ಡ ಕಾಡನೂರು ಗ್ರಾಮ ಮುಖ್ಯ ರಸ್ತೆಯಲ್ಲಿ ಇರುವುದರಿಂದ ಸ್ಥಳಾಂತರವಾಯಿತು. ದೊಡ್ಡ ಕಾಡನೂರು ವೃತ್ತದಲ್ಲಿ ಶಾಲಾ-ಕಾಲೇಜು, ಸಮುದಾಯ ಆರೋಗ್ಯ ಕೇಂದ್ರ, ಅಂಚೆ ಕಚೇರಿ, ಗ್ರಾಮ ಪಂಚಾಯಿತಿ, ಗ್ರಾಮೀಣ ಬ್ಯಾಂಕ್, ಕಾವೇರಿ ನೀರಾವರಿ ನಿಗಮ, ವಿದ್ಯಾರ್ಥಿ ನಿಲಯ, ಬಾರ್ ಅಂಡ್ ರೆಸ್ಟೋರೆಂಟ್, ಪಶು ವೈದ್ಯಕೀಯ ಆಸ್ಪತ್ರೆ, ಸೇರಿ ಸರ್ಕಾರಿ ಕಚೇರಿಗಳಿದ್ದು ಅಹಿತಕರ ಘಟನೆಗಳು ಸಂಭವಿಸಬಾರದೆಂಬ ಉದ್ದೇಶದಿಂದಠಾಣೆಯನ್ನು ತೆರೆಯಲಾಗಿತ್ತು.

ಗ್ರಾಮ ಅಭಿವೃದ್ಧಿಯಾದಂತೆ ಜನಸಂಖ್ಯೆ ಹಾಗು ವಾಹನಗಳ ದಟ್ಟಣೆ ಹೆಚ್ಚಾದಂತೆ ಅಪಘಾತಗಳು ಸಂಭವಿಸುತ್ತವೆ. ಇತ್ತೀಚೆಗೆ ಇಲ್ಲಿ ರಸ್ತೆ ಸುರಕ್ಷತಾ ನಿಯಮಗಳು ಉಲ್ಲಂಘನೆ ಯಾಗುತ್ತಿವೆ. ಈ ಭಾಗದಲ್ಲಿ ಕುಡುಕರ ಹಾವಳಿ ಹೆಚ್ಚಾಗಿದ್ದು ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ವಿಫಲವಾಗಿದೆ. ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ಸಹಕಾರಿಯಾಗಲೆಂದು ಪೊಲೀಸ್ ಉಪಠಾಣೆಯನ್ನು ನಿರ್ಮಿಸಿದರು ಪ್ರಯೋಜನವಾಗುತ್ತಿಲ್ಲ. ದೊಡ್ಡ ಕಾಡನೂರಿನ ಪೊಲೀಸ್ ಉಪ ಠಾಣೆಯನ್ನು ಮುಚ್ಚಿಸಿರುವುದಕ್ಕೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಳ್ಳಿ ಮೈಸೂರು ಗ್ರಾಮದಲ್ಲಿ ಪೊಲೀಸ್ ಠಾಣೆ ತೆರೆದ ಬಳಿಕ ದೊಡ್ಡ ಕಾಡನೂರಿನ ಪೊಲೀಸ್ ಉಪಠಾಣೆ ಏಕಾಏಕಿ ಕಣ್ಮರೆಯಾಗಿದೆ. ಬಹುತೇಕ ಈ ಭಾಗದ ಜನರಿಗೆ ಭಯ ಭೀತಿ ಇಲ್ಲದಂತಾಗಿದೆ. ಹೇಳುವವರು ಕೇಳುವವರು ಯಾರು ಇಲ್ಲ ಎಂಬ ವ್ಯಾಖ್ಯಾನ ವ್ಯಕ್ತವಾಗುತ್ತಿದೆ. ರಸ್ತೆ ಸುರಕ್ಷತೆ ಉಲ್ಲಂಘನೆಯಾಗುತ್ತಿದೆ. ವಾಹನಗಳನ್ನು ಯುವಕರು ಮನಸೋಇಚ್ಛೆ ಅಡ್ಡಾದಿ ಡ್ಡಿಯಾಗಿ ಸಂಚರಿಸುತ್ತಾರೆ. ಬೇಕಾಬಿಟ್ಟಿ ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ವಾಹನಗಳನ್ನು ನಿಲ್ಲಿಸಿ, ಬೇಜವಾಬ್ದಾರಿತನ ತೋರುತ್ತಿದ್ದಾರೆ. ಅಪಘಾತಗಳು ಹೆಚ್ಚು ಸಂಭವಿಸುತ್ತಿವೆ.

ಶಾಲಾ-ಕಾಲೇಜು ಹೆಣ್ಣು ಮಕ್ಕಳನ್ನು ಚುಡಾಯಿಸುವುದು ರೇಗಿಸುವುದು ಎಗ್ಗಿಲ್ಲದೆ ನಡೆಯುತ್ತಿದೆ. ದರೋಡೆಗಳು, ಕಳ್ಳತನ, ಹೆಚ್ಚು ನಡೆಯುತ್ತಿವೆ. ಕೇಳಲು ಹೋದ ಜನರಿಗೆ ಅವಾಚ್ಯ ಪದಗಳಿಂದ ನಿಂದಿಸಿ ಹಲ್ಲೆ ಮಾಡಲು ಪ್ರಯತ್ನಿಸುವುದು ಮಿತಿಮೀರಿದೆ. ದೊಡ್ಡ ಕಾಡನೂರಿನ ಆಸುಪಾಸಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಗಳಿದ್ದು ಶಾಂತಿಗೆ ಭಂಗವುಂಟಾಗಿದೆ.

ಸುತ್ತಮುತ್ತಲಿನ ಜನರಿಗೆ ದೊಡ್ಡ ಕಾಡನೂರಿನ ಪೊಲೀಸ್ ಉಪಠಾಣೆ ಕೈಗೆಟುಕುತ್ತಿತ್ತು ಅವಘಡಗಳು ಸಂಭವಿಸಿದರೆ ತಕ್ಷಣ ದೂರು ನೀಡಲು ಅನುಕೂಲವಾಗುತ್ತಿತ್ತು. ಇದರ ಬಾಗಿಲು ಮುಚ್ಚಿರುವುದರಿಂದ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಹಳ್ಳಿ ಮೈಸೂರು ಪೊಲೀಸ್ ಠಾಣೆಗೆ ಅವಘಡಗಳು ಸಂಬಂಧಿಸಿದ ಕುರಿತು ದೂರು ನೀಡಲು ಹರಸಾಹಸ ಪಡಬೇಕಿದೆ. ಪೊಲೀಸರು ಅಕ್ರಮಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿದ್ದಾರೆ. ಲಂಚವಿಲ್ಲದೆ ಯಾವುದೇ ಕೆಲಸ ಕಾರ್ಯ ಗಳನ್ನು ಕೈಗೆತ್ತಿಕೊಳ್ಳುವುದಿಲ್ಲ ಯಾರ ಮಾತನ್ನು ಕೇಳುವುದಿಲ್ಲ ತಮಗಿಷ್ಟ ಬಂದಂತೆ ನಡೆದು ಕೊಳ್ಳುತ್ತಿದ್ದಾರೆ. ಈಗಿರುವ ಮಹಿಳಾ ಠಾಣಾಧಿಕಾರಿಂದ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಕಾರ್ಯಗಳು ಅವ್ಯವಸ್ಥೆಯಿಂದ ಕೂಡಿವೆ ಎಂದು ಸಾರ್ವಜನಿಕರು ದೂರಿದ್ದಾರೆ.

ಹಳ್ಳಿ ಮೈಸೂರಿಗೆ ಹೋಗಿ ದೂರು ನೀಡಲು ಬಸ್ಸಿನ ಸೌಕರ್ಯವಿಲ್ಲ. ಈ ಹಿಂದೆ ದೊಡ್ಡ ಕಾಡನೂರಿನ ಪೊಲೀಸ್ ಉಪ ಠಾಣೆಯಲ್ಲಿ ಒಬ್ಬ ಎಎಸ್ಐ, ದಫೇದಾರ್, ಇಬ್ಬರು ಕಾನ್ಸ ಟೇಬಲ್‌ಗಳಿದ್ದರು. ಇತ್ತೀಚೆಗೆ ಸಿಬ್ಬಂದಿ ಕೊರತೆಯಿಂದ ಈ ಠಾಣೆ ಬಾಗಿಲನ್ನು ಮುಚ್ಚಿಸಲಾಗಿದೆ ಎಂದು ಹೆಸರು ಹೇಳಲು ಇಚ್ಚಿಸದ ಪೊಲೀಸರು ಹೇಳುತ್ತಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಇತ್ತ ಗಮನ ಹರಿಸಿ ಈ ಭಾಗದಲ್ಲಿದ್ದ ಪೊಲೀಸ್ ಉಪ ಠಾಣೆಗೆ ಸಿಬ್ಬಂದಿ ನೇಮಿಸಿ ಠಾಣೆಯನ್ನು ಉಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿ ಕೊಡಬೇಕೆಂದು ಸಾರ್ವಜನಿಕರ ಒತ್ತಾಸೆಯಾಗಿದೆ.

ದೊಡ್ಡ ಕಾಡನೂರು, ನಗರನಹಳ್ಳಿ, ದೊಡ್ಡಹಳ್ಳಿ ಕೊಪ್ಪಲು ಗ್ರಾಮ ಪಂಚಾಯಿತಿ ವೃತ್ತ ಗಳಾಗಿದ್ದು ಇವುಗಳ ವ್ಯಾಪ್ತಿಯಲ್ಲಿ ರಂಗೇನಹಳ್ಳಿ, ಕಬ್ಬೂರು, ಅಣ್ಣೇ ಚಾಕನಹಳ್ಳಿ, ಚಿಕ್ಕ ಕಾಡನೂರು, ಮೆಣಗನಹಳ್ಳಿ ಆಲ ಗೌಡನಹಳ್ಳಿ, ಬಾಚನಹಳ್ಳಿ, ಮಲ್ಲೇನಹಳ್ಳಿ, ಲಗ್ನಳ್ಳಿ, ಮೂಡಲ ಮಾಯಿ ಗೌಡನಹಳ್ಳಿ, ಕೂಳಿಕೆರೆ ಕೊಪ್ಪಲು, ಯಡೆಗೌಡನಹಳ್ಳಿ ದೊಡ್ಡಹಳ್ಳಿ, ಮರಳ್ಳಿ, ಒಳಗೊಂಡಂತೆ ಸುಮಾರು 35 ಗ್ರಾಮಗಳು ಉಪ ಠಾಣೆಯ ಸರಹದ್ದಿಗೆ ಒಳಪಟ್ಟಿದ್ದವು. ಯಾವುದೇ ಭಾಗದಲ್ಲಿ ತೊಂದರೆಯಾದರೆ ತಕ್ಷಣ ಪೊಲೀಸರು ನೆರವಿಗೆ ಬಂದು ಸ್ಪಂದಿಸುತ್ತಿದ್ದರು. ಪ್ರಸ್ತುತ ವ್ಯವಸ್ಥೆ ಬದಲಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗಿದೆ.

ಈ ಭಾಗದಲ್ಲಿ ಸಂಜೆಯಾದ ನಂತರ ಪೊಲೀಸ್ ಬೀಟ್ ವ್ಯವಸ್ಥೆಯಿಲ್ಲದೆ ಕಳ್ಳ ಕಾಕರಿಗೆ, ಕುಡುಕರಿಗೆ ಅನುಕೂಲವಾಗಿದೆ. ರಾತ್ರಿ ಸಮಯದಲ್ಲಿ ರೈತರ ಪಂಪ್ಸೆಟ್‌ನ ಎಲೆಕ್ಟ್ರಿಕಲ್ ಸಾಮಾಗ್ರಿ, ಹಾಗು ಪೈಪುಗಳನ್ನು ಕದಿಯುವುದು ಹೆಚ್ಚಾಗಿ ನಡೆಯುತ್ತಿದೆ.

> **ಮೈಸೂರು ರಸ್ತೆ ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ರಸ್ತೆ ಸಂಚಾರ ಸುರಕ್ಷತಾ ದೃಷ್ಟಿಯಿಂದ ಪೊಲೀಸ್ ಚೌಕಿ ಅವಶ್ಯಕತೆ ಇದೆ. ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿದ್ದು ಅವಶ್ಯಕತೆಗೆ ತಕ್ಕಂತೆ ನಿಯೋಜನೆ ಮಾಡಿಕೊಡುವಂತೆ ಮೇಲಧಿಕಾರಿಗಳಿಗೆ ವರದಿ ನೀಡಿದ್ದೇವೆ. ದೊಡ್ಡ ಕಾಡನೂರು ಠಾಣೆಗೆ ಸಿಬ್ಬಂದಿ ನೇಮಿಸಿದರೆ ಕಾನೂನು ಕ್ರಮ ವಹಿಸಲು ಅನುಕೂಲವಾಗಲಿದೆ.**
> **-ಸಂತೋಷ್, ಸಿಪಿಐ ಹೊಳೆನರಸೀಪುರ**

## ಮೋದಿ ಭಾಷಣ ನೀತಿ ಸಂಹಿತೆ ಉಲ್ಲಂಘನೆ: ಕ್ರಮಕ್ಕೆ ಎಡಪಕ್ಷಗಳ ಆಗ್ರಹ

• ಪ್ರಜೋದಯ ವರದಿ



**ನವದೆಹಲಿ:** ಶನಿವಾರದಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರವನ್ನುದ್ದೇಶಿಸಿ ಮಾಡಿದ ಭಾಷಣವು ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಎಡಪಕ್ಷಗಳು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ಪತ್ರ ಬರೆದಿವೆ. ಅಲ್ಲದೆ ಪ್ರಧಾನಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿವೆ.


ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಸಾರ್ವಜನಿಕ ಅಭಿಪ್ರಾಯದ ಮೇಲೆ ಪ್ರಭಾವ ಬೀರಲು ಸಾರ್ವಜನಿಕ ಪ್ರಸಾರ ಮಾಧ್ಯಮವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಮತ್ತು ಸಿಪಿಐ ರಾಜ್ಯಸಭಾ ಸಂಸದ ಪಿ.ಸಂದೋಷ್ ಕುಮಾರ್ ಅವರು ಚುನಾವಣಾ ಆಯುಕ್ತರಿಗೆ ಬರೆ ಪ್ರತ್ಯೇಕ ಪತ್ರಗಳಲ್ಲಿ ಹೇಳಿದ್ದಾರೆ.

ಚುನಾವಣಾ ಸಮಿತಿಯ ಮುಖ್ಯಸ್ಥರಿಗೆ ಬರೆದ ಪತ್ರದಲ್ಲಿ ಬೇಬಿ ಅವರು, ಪ್ರಧಾನಿಯವರು ರಾಜಕೀಯ ಭಾಷಣ ಮಾಡಲು ಸಾರ್ವಜನಿಕ ಪ್ರಸಾರ ಸಂಸ್ಥೆಯಾದ ದೂರದರ್ಶನವನ್ನು ದುರುಪಯೋಗಪಡಿಸಿಕೊಂಡಿರುವುದು ಮಾದರಿ ನೀತಿ ಸಂಹಿತೆಯ ಗಂಭೀರ ಉಲ್ಲಂಘನೆ. ಈ ಭಾಷಣದ ವಿಷಯ, ಸಂದೇಶವನ್ನು ಯಾವುದೇ ಕಾರಣಕ್ಕೂ ಸರ್ಕಾರದ ಸಂವಹನ ಎಂದು ಕರೆಯಲು ಸಾಧ್ಯವಿಲ್ಲ ಎಂದು ಬೇಬಿಯವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಭಾಷಣ ಸಂಪೂರ್ಣವಾಗಿ ರಾಜಕೀಯ ಪ್ರೇರಿತವಾಗಿದ್ದು, ವಿರೋಧ ಪಕ್ಷಗಳನ್ನು ಗುರಿಯಾ ಗಿಸಿಕೊಂಡಿದೆ. ಅವುಗಳಲ್ಲಿ ಹಲವು ಪಕ್ಷಗಳ ಹೆಸರನ್ನು ಪ್ರಸ್ತಾಪಿಸಲಾಗಿದೆ. ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದ ಮತದಾರರು ಸೇರಿ ಸಾರ್ವಜನಿಕರ ಮೇಲೆ ಆಡಳಿತ ಪಕ್ಷದ ಪರವಾಗಿ ಪ್ರಭಾವ ಬೀರಲು ಪ್ರಯತ್ನಿಸಿದೆ ಎಂದು ಅವರು ತಿಳಿಸಿದ್ದಾರೆ.

ದೂರದರ್ಶನ ಮತ್ತು ಸಂಸದ್ ಟಿವಿಯಂತಹ ಸಾರ್ವಜನಿಕ ವೇದಿಕೆಗಳಲ್ಲಿ ಈ ಭಾಷಣವನ್ನು ಪ್ರಸಾರ ಮಾಡಿರುವುದು ಸರ್ಕಾರದ ಸಂಪನ್ಮೂಲಗಳ ದುರುಪಯೋಗವಾಗಿದೆ. ರಾಜಕೀಯ ಭಾಷಣಕ್ಕೆ ಸಾರ್ವಜನಿಕ ಅನುದಾನಿತ ವೇದಿಕೆಗಳನ್ನು ಬಳಸುವುದು ಚುನಾವಣಾ ಮಾನದಂಡ ಗಳ ಗಂಭೀರ ಉಲ್ಲಂಘನೆಯಾಗಿದೆಂದು ಸಿಪಿಐ ನಾಯಕ ಪಿ.ಸಂದೋಷ್ ಕುಮಾರ್ ಹೇಳಿದ್ದಾರೆ.

ಅದರ ವಿರುದ್ಧ ಚುನಾವಣಾ ಆಯೋಗ ತುರ್ತು ಹಾಗೂ ಪ್ರಾಮಾಣಿಕ ಕ್ರಮ ತೆಗೆದು ಕೊಳ್ಳಬೇಕು.ಈ ಬಗ್ಗೆ ತನಿಖೆ ಆರಂಭಿಸಬೇಕು. ಕ್ರಮ ಕೈಗೊಳ್ಳಲು ವಿಫಲವಾದರೆ ಅದು ಚುನಾವಣಾ ಆಯೋಗದ ನಿಷ್ಪಕ್ಷಪಾತದ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕುಗ್ಗಿಸಬಹುದೆಂದು ಅವರು ಹೇಳಿದ್ದಾರೆ.



**ಅರಕಲಗೂಡು: ತಾಲ್ಲೂಕಿನ ಕೊಣನೂರಿನಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಶನೇಶ್ವರ ಸ್ವಾಮಿ ನೂತನ ದೇವಸ್ಥಾನ ಶನಿವಾರ ಲೋಕಾರ್ಪಣೆಗೊಂಡಿತು. ಕಾವೇರಿ ನದಿಯಲ್ಲಿ ಗಂಗಾ ಪೂಜೆಯೊಂದಿಗೆ ದೇವರ ಉತ್ಸವ ವೈಭವದಿಂದ ಸಾಗಿತು. ಮಹಿಳೆಯರು ಕಳಸ ಹೊತ್ತು ಮೆರವ ಣಿಗೆಯಲ್ಲಿ ಸಾಗಿದರು. ದೇವಸ್ಥಾನದಲ್ಲಿ ವಿವಿಧ ಪೂಜಾ ವಿಧಾನಗಳು ನಡೆದವು. ಭಕ್ತರು ದೇವಸ್ಥಾನ ದಲ್ಲಿ ಪೂಜೆ ಸಲ್ಲಿಸಿ ಪ್ರಸಾದ ಸ್ವೀಕರಿಸಿ ಧನ್ಯತಾಭಾವ ಹೊಂದಿದರು.**

## ರಿಂಕು ಸಿಂಗ್ ಅರ್ಧ ಶತಕ: ಕೆಕೆಆರ್‌ಗೆ ಜಯ



• ಪ್ರಜೋದಯ ವರದಿ

**ಕೋಲ್ಕತ್ತಾ:** ಇಂಡಿಯನ್ ಪ್ರೀಮಿಯರ್ ಲೀಗ್ 2026ರ 28ನೇ ಪಂದ್ಯದಲ್ಲಿ ಬಲಿಷ್ಠ ರಾಜಸ್ತಾನ ರಾಯಲ್ಸ್ ತಂಡದ ವಿರುದ್ಧ ಕೋಲ್ಕತ್ತಾ ನೈಟ್ ರೈಡರ್ಸ್ 4 ವಿಕೆಟ್‌ಗಳ ಜಯ ಸಾಧಿಸಿತು.

ಈ ಬಾರಿಯ ಐಪಿಎಲ್‌ನಲ್ಲಿ ಆಡಿರುವ 6 ಪಂದ್ಯಗಳಲ್ಲಿ ಯಾವುದೇ ಗೆಲುವು ದಾಖಲಿಸದ ಕೆಕೆಆರ್ ಮೊದಲ ಗೆಲುವಿನ ನಗೆ ಬೀರಿತು.

ರಾಜಸ್ಥಾನ ರಾಯಲ್ಸ್ ಹಾಗೂ ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಇಲ್ಲಿನ ಈಡನ್ ಗಾರ್ಡನ್ಸ್ ಕ್ರಿಕೆಟ್ ಮೈದಾನದಲ್ಲಿ ಮುಖಾಮುಖಿಯಾದವು. ಟಾಸ್ ಗೆದ್ದ ರಾಜಸ್ಥಾನ ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿತು.

ರಾಜಸ್ಥಾನ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 155 ರನ್‌ಗಳನ್ನು ಪೇರಿಸಿತು. ವೈಭವ್ ಸೂರ್ಯವಂಶಿ 46, ಜೈಸ್ವಾಲ್ 39 ರನ್ ಗಳಿಸಿದರು. ಉಳಿದ ಬ್ಯಾಟರ್‌ಗಳು ಕಳಪೆ ಪ್ರದರ್ಶನ ತೋರಿದರು. ಕೆಕೆಆರ್‌ನ ತ್ಯಾಗಿ, ವರುಣ್ ತಲಾ 3 ವಿಕೆಟ್ ಪಡೆದರು.

156 ರನ್‌ಗಳ ಗುರಿ ಬೆನ್ನಟ್ಟಿದ ಕೋಲ್ಕತ್ತಾನೈಟ್ ರೈಡರ್ಸ್ 2 ಬಾಲ್‌ಗಳು ಬಾಕಿ ಇರುವಂತೆ 4 ವಿಕೆಟ್‌ಗಳ ಜಯ ಸಾಧಿಸಿತು. ಮಧ್ಯಮ ಕ್ರಮಾಂಕದಲ್ಲಿ ಬಂದ ರಿಂಕು ಸಿಂಗ್ ಅರ್ಧ ಶತಕ ದಾಖಲಿಸಿ ತಂಡದ ಗೆಲುವಿಗೆ ಕಾರಣರಾದರು.

ಸಂಕ್ಷಿಪ್ತ ಸ್ಕೋರ್: ಆರ್‌ಆರ್: 155/9, ಕೆಕೆಆರ್: 161/6.

## ಜನಪದ ಕಲೆ ಉಳಿಸುವುದು ಎಲ್ಲರ ಜವಾಬ್ದಾರಿ

• ಪ್ರಜೋದಯ ವರದಿ



**ನುಗ್ಗೇಹಳ್ಳಿ:** ಗ್ರಾಮೀಣ ಪ್ರದೇಶದ ಮೂಲ ಪರಂಪರೆಯಾದ ನಾಟಕ, ಜನಪದ ಕಲೆ, ಕೋಲಾಟ ಸೇರಿ ವಿವಿಧ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ತಿಳಿಸಿದರು.

ಹೋಬಳಿಯ ಹೂವಿನಹಳ್ಳಿ ಗ್ರಾಮದಲ್ಲಿ ಶ್ರೀ ಮಾರುತಿ ಕೃಪಾ ಪೋಷಿತ ನಾಟಕ ಮಂಡಳಿ ವತಿಯಿಂದ ಶ್ರೀ ವೆಂಕಟೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಆಯೋಜಿಸಲಾದ ರಾಜ ಸತ್ಯವ್ರತ ಅಥವಾ ಶನಿ ಪ್ರಭಾವ ನಾಟಕ ಪ್ರದರ್ಶನದಲ್ಲಿ ಅವರು ಮಾತನಾಡಿದರು.

ಪೂರ್ವಿಕರ ಕಾಲದಲ್ಲಿ ಜಾತ್ರೆ ಹಾಗು ಹಬ್ಬಗಳ ಸಂದರ್ಭಗಳಲ್ಲಿ ನಾಟಕಗಳನ್ನು ಕಲಿತು ಅಭಿನಯಿಸುವ ಮೂಲಕ ಕಲೆಯನ್ನು ಉಳಿಸಿಕೊಂಡು ಬಂದಿದ್ದರು. ಆದರೆ ಇಂದಿನ ವೈಜ್ಞಾನಿಕ ಯುಗದಲ್ಲಿ ಯುವಕರು ಯೂಟ್ಯೂಬ್, ಸಾಮಾಜಿಕ ಜಾಲ ತಾಣಗಳತ್ತ ಒಲವು ತೋರಿಸುತ್ತಿರುವುದರಿಂದ ಜನಪದ ಕಲೆಗಳು ನಶಿಸುವ ಹಂತಕ್ಕೆ ತಲುಪಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಹಳ್ಳಿಗಳಲ್ಲಿ ನಾಟಕ ಪ್ರದರ್ಶನಗಳು ನಡೆಯುವುದರಿಂದ ಧಾರ್ಮಿಕ ಭಾವನೆಗಳು ಹೆಚ್ಚುವು ದರ ಜೊತೆಗೆ ಕಲೆಯ ಉಳಿವಿಗೂ ಸಹಕಾರಿ ಆಗುತ್ತದೆ. ಹೂವಿನಹಳ್ಳಿ ಗ್ರಾಮಸ್ಥರು ಈ ನಾಟಕ ವನ್ನು ಆಯೋಜಿಸುವ ಮೂಲಕ ಕಲೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಿದ್ದಾರೆಂದು ಶ್ಲಾಘಿಸಿದರು.


ಗ್ರಾಮದಲ್ಲಿ ರಸ್ತೆ, ಹೊಸ ಡೈರಿ ಕಟ್ಟಡ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರು ಸೇರಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಒದಗಿಸಲಾಗಿದೆಂದು ಹೇಳಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಅವರು ಮಾತನಾಡಿ, ಗ್ರಾಮಸ್ಥರ ಸಹಕಾರದಿಂದ ನಾಟಕ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದ್ದು, ಮುಂದಿನ ದಿನಗಳಲ್ಲಿ ಗ್ರಾಮದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಹೆಚ್.ಎಂ.ನಟರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಟಿಎಪಿಎಂಎಸ್ ನಿರ್ದೇಶಕ ತೋಟಿ ನಾಗರಾಜ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಎಂ. ಗೋಪಾಲ್, ಹೆಚ್.ಸಿ.ನಾಗರಾಜ್, ದ್ರಾಕ್ಷಾಯಿಣಿ ಯಲ್ಲಪ್ಪ ಇತರರಿದ್ದರು.

## ತಮಿಳುನಾಡು ಚುನಾವಣೆ: ಚೆನ್ನೈಪ್ರಣಾಳಿಕೆ ಬಿಡುಗಡೆ ಮಾಡಿದ ಸ್ಟಾಲಿನ್

• ಪ್ರಜೋದಯ ವರದಿ



**ಚೆನ್ನೈ:** ಚೆನ್ನೈ ನಗರವನ್ನೇ ಕೇಂದ್ರೀಕರಿಸಿಕೊಂಡು ರೂಪಿಸಿರುವ ಚುನಾವಣಾ ಪ್ರಣಾಳಿಕೆ ಯನ್ನು ಡಿಎಂಕೆ ಪಕ್ಷವು ಭಾನುವಾರ ಬಿಡುಗಡೆ ಮಾಡಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಡಿಎಂಕೆ ಪ್ರಧಾನ ಕಚೇರಿಯಲ್ಲಿ ಚೆನ್ನೈ ಸೂಪರ್ 6 ಹೆಸರಿನ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದರು. ಅಣ್ಣಾ ಅರಿವಲಯಂ ಪ್ರಣಾಳಿಕೆಯ ಮೊದಲ ಪ್ರತಿಯನ್ನು ಪಕ್ಷದ ಸಂಘಟನಾ ಕಾರ್ಯದರ್ಶಿ ಆರ್.ಎಸ್.ಭಾರತಿ ಸ್ವೀಕರಿಸಿದರು.

ಪ್ರಣಾಳಿಕೆಯು ಆರು ಅಂಶಗಳಿಂದ ಕೂಡಿದೆ. ವಾಹನ ದಟ್ಟಣೆ ಹಾಗೂ ಪ್ರಯಾಣದ ಸಮಯ ಕಡಿಮೆ ಮಾಡಲಿಕ್ಕಾಗಿ 1 ಸಾವಿರ ಹೊಸ ಮಿನಿ ಬಸ್ ಓಡಿಸಲಾಗುವುದು. ಎಐ ಮೂಲಕ ಸಾರಿಗೆ ಸಂಚಾರದ ನಿರ್ವಹಣೆ ಮಾಡಲಾಗುವುದು ಎಂದಿದೆ.

ಮಳೆನೀರಿನ ಚರಂಡಿಗಳು, ಪ್ರಮುಖ ರಸ್ತೆ ಯೋಜನೆಗಳು, ವಿಶ್ವದರ್ಜೆಯ ಸೌಲಭ್ಯಗಳು ಆಡಳಿತ ಪಕ್ಷವು ನೀಡಿರುವ ಭರವಸೆಗಳಲ್ಲಿ ಸೇರಿವೆ. ಬೀದಿ ನಾಯಿ ಉಪಟಳ ನಿಭಾಯಿಸಲು ಪಶುವೈದ್ಯಕೀಯ ವೈದ್ಯರು ಹಾಗೂ ಕ್ಷೇತ್ರ ಸಿಬ್ಬಂದಿಗಳ ಸಂಖ್ಯೆಯನ್ನು ಮೂರು ಪಟ್ಟು ಹೆಚ್ಚಿಸು ವುದಾಗಿ ಪಕ್ಷ ಹೇಳಿದೆ.

ಕೃತಕ ಬುದ್ಧಿಮತ್ತೆ (ಎಐ), ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್, ತಂತ್ರಜ್ಞಾನದ ವಿಶೇಷ ಕೇಂದ್ರಗಳ ಭರವಸೆಯನ್ನೂ ನೀಡಿದೆ.

## ಪಹಲ್ಗಾಮ್‌ದ ದಾಳಿಗೆ ವರ್ಷ: ಗಡಿಯಾಚೆಗಿನ ಪಿತ್ತೂರಿ ಬಗ್ಗೆ ಎನ್‌ಐಎ ವಿಸ್ತೃತ ತನಿಖೆ



**ಶ್ರೀನಗರ:** ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ವರ್ಷವಾಗುತ್ತಿದೆ. ರಾಷ್ಟ್ರೀಯ ತನಿಖಾ ಸಂಸ್ಥೆಯು(ಎನ್‌ಐಎ) ತಾಂತ್ರಿಕ ಮಾಹಿತಿ, ಶಂಕಿತರು, ಸ್ಥಳೀಯ ಸಂಬಂಧಿತ ವ್ಯಕ್ತಿಗಳ ವಿಚಾರಣೆ ಸೇರಿ ಹಂತ ಹಂತವಾಗಿ ತನಿಖೆ ನಡೆಸುತ್ತಿದೆ.

ಘಟನೆ ನಡೆದು ಕೆಲವೇ ದಿನಗಳ ನಂತರ ಪ್ರಕರಣದ ತನಿಖೆ ವಹಿಸಿ ಕೊಂಡ ಎನ್‌ಐಎ, 150ಕ್ಕೂ ಹೆಚ್ಚು ಜನರನ್ನು ಪ್ರಶ್ನಿಸಿದ್ದು, ಶಂಕಿತ ಭೂಗತ ಭಯೋತ್ಪಾದಕರನ್ನು ಪತ್ತೆಹಚ್ಚುವ ಕಾರ್ಯದಲ್ಲಿ ತೊಡಗಿದೆ. ದಾಳಿಗೆ ಸ್ಥಳೀಯರ ಬೆಂಬಲದ ಜಾಲ ಪತ್ತೆ ಯಾದ ನಂತರ ತನಿಖೆ ಮತ್ತೊಂದು ತಿರುವು ಪಡೆದುಕೊಂಡಿದೆ. ದಾಳಿಕೋರರಿಗೆ ಆಶ್ರಯ ನೀಡಿದ್ದ ಆರೋಪದ ಮೇಲೆ ಇಬ್ಬರು ಆರೋಪಿಗಳನ್ನು ಬಂಧಿಸಲಾಯಿತು. ನಂತರ, ಭಯೋತ್ಪಾದಕ ಹಣಕಾಸು ಸಂಪರ್ಕಗಳ ಆರೋಪದ ಮೇಲೆ ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆಯ ಡಿಯಲ್ಲಿ ಮತ್ತೊಬ್ಬ ಶಂಕಿತನನ್ನು ಬಂಧಿಸಲಾಯಿತು.

## ಶಾಸಕ ಸುರೇಶ್ ವಿರುದ್ಧ ವೀರಶೈವ ಮುಖಂಡರ ಆಕ್ರೋಶ




• ಪ್ರಜೋದಯ ವರದಿ

**ಬೇಲೂರು:** ತಹಶೀಲ್ದಾರ್ ಸೇರಿ ವೀರಶೈವ ಸಮಾಜಕ್ಕೆ ಸೇರಿದ ಅಧಿಕಾರಿಗಳನ್ನು ಗುರಿಯಾಗಿಸಿ ಶಾಸಕ ಹೆಚ್.ಕೆ.ಸುರೇಶ್ ಪರೋಕ್ಷ ದಾಳಿ ನಡೆಸುತ್ತಿದ್ದಾರೆಂದು ಬಿಕ್ಕೋಡು ಹೋಬಳಿ ಕಾಂಗ್ರೆಸ್ ಅಧ್ಯಕ್ಷ ಹಾಗು ವೀರಶೈವ ಮುಖಂಡ ಮಲ್ಲೇಶ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿ, ಶಾಸಕರು ನೇರವಾಗಿ ಎದುರಿಸಲು ಸಾಧ್ಯ ವಾಗದೆ ಜನರನ್ನು ಪ್ರೇರೇಪಿಸಿ ಸಮಾಜದ ಅಧಿಕಾರಿಗಳನ್ನು ಬಲಿಪಶು ಮಾಡುವ ಪರಿಸ್ಥಿತಿ ನಿರ್ಮಿಸುತ್ತಿದ್ದಾರೆ. ಕಳೆದ ಆರು ತಿಂಗಳಿನಿಂದ ಈ ರೀತಿಯ ಘಟನೆಗಳು ನಿರಂತರವಾಗಿ ನಡೆ ಯುತ್ತಿದ್ದು, ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್ ಸೇರಿ ಹಲವು ಇಲಾಖೆಯ ಅಧಿಕಾರಿಗಳು ತೊಂದರೆ ಅನುಭವಿಸಿದ್ದಾರೆಂದು ದೂರಿದರು.

ದಬ್ಬೆ ಗ್ರಾಮ ಪಂಚಾಯಿತಿ ಸದಸ್ಯ ಸಂತೋಷ್ ಹಾಗು ಬಗರ್ ಹುಕುಂ ಸದಸ್ಯ ಪ್ರದೀಪ್ ಅವರು ಮಾತನಾಡಿ, ಉತ್ತಮವಾಗಿ ಕೆಲಸ ನಿರ್ವಹಿಸುವ ಅಧಿಕಾರಿಗಳ ವಿರುದ್ಧ ಇಂತಹ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಆತಂಕಕಾರಿ. ಇದೇ ಪರಿಸ್ಥಿತಿ ಮುಂದು ವರಿದರೆ ಮುಂದಿನ ದಿನಗಳಲ್ಲಿ ಹೋರಾಟ ಕೈಗೊಳ್ಳುವುದಾಗಿ ಎಚ್ಚರಿಸಿದರು.

ವೀರಶೈವ ಸಮಾಜದ ಮತಗಳಿಂದ ಗೆದ್ದ ಶಾಸಕರು ಇದೀಗ ಅದೇ ಸಮಾಜದ ವಿರುದ್ಧ ನಡೆದುಕೊಳ್ಳುತ್ತಿದ್ದಾರೆ. ಕೆಲಸ ಮಾಡುವ ಅಧಿಕಾರಿಗಳ ಮೇಲೆ ಲಂಚದ ಆರೋಪ ಹೊರಿಸಿ ಅವರನ್ನು ವರ್ಗಾವಣೆ ಮಾಡಲಾಗುತ್ತಿದೆಂದು ಆರೋಪಿಸಿದರು.

ತಾಲ್ಲೂಕು ಕಚೇರಿಯಲ್ಲಿ ರೈತರಿಗೆ ಸಮರ್ಪಕ ಸೇವೆ ಸಿಗುತ್ತಿಲ್ಲ. ಕೇವಲ ಒಂದು ಸಮುದಾಯವಷ್ಟೇ ಅಲ್ಲದೆ, ಎಲ್ಲಾ ವರ್ಗದ ಅಧಿಕಾರಿಗಳು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆಂದು ಹೇಳಿದರು.

ಕಳೆದ ಮೂರು ವರ್ಷಗಳಲ್ಲಿ ತಾಲ್ಲೂಕಿನಲ್ಲಿ ಅನೇಕ ಅಧಿಕಾರಿಗಳು ವರ್ಗಾವಣೆಗೊಂಡಿದ್ದು, ಅಮಾನತು ಆಗಿರುವ ಘಟನೆಗಳೂ ಹೆಚ್ಚಾಗಿವೆ. ಈ ಪರಿಸ್ಥಿತಿಯಿಂದ ಅಧಿಕಾರಿಗಳು ಇಲ್ಲಿ ಸೇವೆ ಸಲ್ಲಿಸಲು ಹೆದರುವ ಸ್ಥಿತಿ ನಿರ್ಮಾಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಂದು ಕೆಲಸ ಮಾಡಲು ಬಿಡುವುದಿಲ್ಲ. ಕೆಲಸ ಮಾಡಿದರೆ ಲಂಚದ ಆರೋಪ, ಮಾಡದಿದ್ದರೆ ನಿರ್ಲಕ್ಷ್ಯದ ಆರೋಪ, ಈ ಪರಿಸ್ಥಿತಿಯಲ್ಲಿ ಅಧಿಕಾರಿಗಳು ಹೇಗೆ ಕೆಲಸ ಮಾಡುತ್ತಾರೆಂದು ಪ್ರಶ್ನಿಸಿದರು.

ತಹಶೀಲ್ದಾರ್ ಸೇರಿ ಅಧಿಕಾರಿಗಳನ್ನು ಉದ್ದೇಶಪೂರ್ವಕವಾಗಿ ಟಾರ್ಗೆಟ್ ಮಾಡಲಾಗುತ್ತಿದೆ. ಶಾಸಕರ ಮಾತು ಕೇಳದಿದ್ದರೆ ನಮ್ಮ ಹಿಡಿತದಲ್ಲಿ ಇಲ್ಲವೆಂದು ಆರೋಪ ಮಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಮುಖಂಡರಾದಕುಮಾರ್, ಯುವ ಕಾಂಗ್ರೆಸ್ ಅಧ್ಯಕ್ಷ ಶರತ್, ಗ್ಯಾರಂಟಿ ಸಮಿತಿ ಸದಸ್ಯ ಸುರೇಶ್ ಇತರರಿದ್ದರು.

## ವಿದ್ಯಾರ್ಥಿಗಳಿಗೆ ಪ್ರಚಲಿತ ವಿದ್ಯಮಾನ ಅರಿವು ಮುಖ್ಯ



• ಪ್ರಜೋದಯ ವರದಿ

**ಜಾವಗಲ್:** ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕ ಅಧ್ಯಯನಕ್ಕೆ ಸೀಮಿತರಾಗದೆ ಪ್ರಚಲಿತ ವಿದ್ಯಮಾನಗಳ ಅರಿವು ಹೊಂದಬೇಕೆಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಹೆಚ್.ಟಿ.ಮೋಹನ್ ಕುಮಾರ್ ಅವರು ಸಲಹೆ ನೀಡಿದರು.

ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಮತ್ತು ಆಂತರಿಕ ಭರವಸೆ ಕೋಶದಿಂದ ಹಮ್ಮಿಕೊಂಡಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಒಂದು ದಿನದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿ, ಈ ಕಾರ್ಯಾಗಾರವು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಮೂಡಿಸುವುದು ಮತ್ತು ಸೂಕ್ತ ತಯಾರಿ ವಿಧಾನಗಳನ್ನು ಪರಿಚಯಿಸುವುದು ಮುಖ್ಯ ಉದ್ದೇಶವಾಗಿದೆ ಎಂದರು.

ಸಾಮಾನ್ಯ ಜ್ಞಾನ, ಪ್ರಸ್ತುತ ಘಟನೆಗಳು ಹಾಗು ತಾರ್ಕಿಕ ಚಿಂತನೆಗಳಲ್ಲಿಯೂ ತಾವು ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಸಂಪನ್ಮೂಲ ವ್ಯಕ್ತಿ ಸತೀಶ್ ಜೋಗ್ ಅವರು ಮಾತನಾಡಿ, ಪರೀಕ್ಷಾ ಮಾದರಿ, ಪ್ರಶ್ನೆಗಳ ಸ್ವರೂಪ, ಸಮಯ ಹಂಚಿಕೆ ಹಾಗು ಓದುವ ಸರಿಯಾದ ವಿಧಾನಗಳ ಬಗ್ಗೆ ಸ್ಪರ್ಧೆ ಮಾರ್ಗ ದರ್ಶನ ನೀಡಿದರು. ಜೊತೆಗೆ ವಿದ್ಯಾರ್ಥಿಗಳು ನಿತ್ಯ ಪತ್ರಿಕೆ ಓದುವುದು, ಟಿಪ್ಪಣಿಗಳನ್ನು ಸಿದ್ಧಪಡಿಸುವುದು ಮತ್ತು ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಅಭ್ಯಾಸ ಮಾಡುವುದರಿಂದ ಉತ್ತಮ ಫಲಿತಾಂಶ ಸಾಧಿಸಬಹುದೆಂದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಶಿವರಾಜ್ ಅವರು ಮಾತನಾಡಿ, ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದರೊಂದಿಗೆ ಗುರಿ ಸಾಧನೆಗೆ ದಿಕ್ಕು ತೋರಿಸುತ್ತವೆಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕ ಮಹೇಶ್, ವಂದನಾ, ಚಿತ್ರಲೇಖ, ಮಂಜುನಾಥ್, ಚಿತ್ರಕಲಾ ಹಾಗು ರವಿಕುಮಾರ್ ಇತರರು ಉಪಸ್ಥಿತರಿದ್ದರು.

## ಆತ್ಮಜ್ಞಾನ ಹೆಚ್ಚಿಸಲು ಧ್ಯಾನ, ಯೋಗ ಸಹಕಾರಿ

• ಪ್ರಜೋದಯ ವರದಿ

**ಹಾಸನ:** ಆತ್ಮಜ್ಞಾನ ಹೆಚ್ಚಿಸಲು ಧ್ಯಾನ, ಯೋಗ, ಪ್ರಾಣಾಯಾಮ ಸಹಕಾರಿಯಾಗಲಿದೆ ಎಂದು ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಯೋಗ ಶಿಕ್ಷಕ ರಮೇಶ್ ಜಾಲಹಳ್ಳಿ ಅವರು ಹೇಳಿದರು.

ನಗರದ ಎಸ್‌ಬಿಎಂ ಕಾಲೋನಿಯ ವಿನಾಯಕ ಯೋಗ ಕೇಂದ್ರದಲ್ಲಿ ನಡೆದ ಆನಂದ ಅನುಭೂತಿ ಶಿಬಿರದ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಅಂತರಂಗದಲ್ಲಿ ಚೈತನ್ಯ, ಆನಂದ ಸ್ವರೂಪವನ್ನು ಜಾಗೃತಗೊಳಿಸಲು, ಮನಸ್ಸಿಗೆ ಶಾಂತಿ ನೀಡಿ ದೇಹಕ್ಕೆ ಶಕ್ತಿ ನೀಡಿ ಬದುಕಿಗೆ ಹೊಸ ದಿಕ್ಕನ್ನು ನೀಡುವಲ್ಲಿ ಶಿಬಿರವು ಸಹಕಾರಿಯಾಗಿದೆ. ನಾವು ಪ್ರಸ್ತುತ ಕಾಲದಲ್ಲಿ ಸಂತೋಷಮಯ ಆನಂದ ಮಯ ಜೀವನ ನಡೆಸುವುದರೊಂದಿಗೆ ಸುಂದರ ಸಮಾಜ ದೊಂದಿಗೆ ಜೀವನ ವನ್ನು ಸಾಗಿಸುವುದನ್ನು ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ ಮಾರ್ಗದರ್ಶನದಿಂದ ರೂಪಿತವಾಗಿರುವ ಆನಂದ ಶಿಬಿರಗ ಳಿಂದ ಕಲಿತು ಅನುಸರಿಸುವುದರಿಂದ ಪ್ರಯೋಜನಕಾರಿಯಾಗಲಿದೆ ಎಂದರು. ಶಿಕ್ಷಕಿ ಜಿ.ವೇದಶ್ರೀ, ಜಿ.ಸುಬ್ರಹ್ಮಣ್ಯ, ಸದಸ್ಯರಾದ ಅರಸೀಕೆರೆ ಪರ ಮೇಶ್ವರಪ್ಪ ಹಾಗು ಬಿ.ಆರ್.ಚನ್ನ ಬಸಪ್ಪ, ಪ್ರಕಾಶ್ ಯಾಜಿ, ಸಿ.ಎನ್.ಚಂದ್ರಶೇಖರ್, ಕಟ್ಟಾಯ ಶಿವಕುಮಾರ್, ಡಾ. ರಾಜಗೋಪಾಲ್ ಇದ್ದರು.



## ಭಾರತದಲ್ಲಿ ಎಲ್‌ಪಿಜಿ ಬಳಕೆ ಶೇ.13 ರಷ್ಟು ಕುಸಿತ

• ಪ್ರಜೋದಯ ವರದಿ



**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಉಂಟಾದ ಪೂರೈಕೆ ವ್ಯತ್ಯಯವು ಗೃಹ ಬಳಕೆ ಮತ್ತು ವಾಣಿಜ್ಯ ಬಳಕೆದಾರರ ಮೇಲೆ ಪರಿಣಾಮ ಬೀರಿದ್ದು, ಮಾರ್ಚ್ ತಿಂಗಳಲ್ಲಿ ದೇಶದ ಅಡುಗೆ ಅನಿಲ (ಎಲ್‌ಪಿಜಿ) ಬಳಕೆ ಶೇ.13ರಷ್ಟು ಕುಸಿತ ಕಂಡಿದೆ ಎಂದು ಇತ್ತೀಚಿನ ಅಧಿಕೃತ ಅಂಕಿ-ಅಂಶಗಳಿಂದ ಗೊತ್ತಾಗಿದೆ.

ಕಳೆದ ವರ್ಷ ಇದೇ ಅವಧಿಯಲ್ಲಿ 2.729 ಮಿಲಿಯನ್ ಟನ್ ಎಲ್‌ಪಿಜಿ ಬಳಕೆಯಾಗಿತ್ತು. ಆದರೆ ಈ ವರ್ಷದ ಮಾರ್ಚ್‌ನಲ್ಲಿ ಬಳಕೆ 2.379 ಮಿಲಿಯನ್ ಟನ್‌ಗಳಿಗೆ ತಲುಪಿದ್ದು, ಶೇ. 12.8 ರಷ್ಟು ಇಳಿಕೆಯಾಗಿದೆ.

ಭಾರತ ತನ್ನ ಒಟ್ಟು ಬೇಡಿಕೆಯ ಎಲ್‌ಪಿಜಿಯ ಶೇ.60 ರಷ್ಟು ಆಮದು ಮಾಡಿಕೊಳ್ಳುತ್ತದೆ. ಅದರ ಬಹುಪಾಲು ಹೊರ್ಮುಜ್ ಜಲಸಂಧಿಯ ಮೂಲಕ ಬರುತ್ತದೆ. ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಜಲಸಂಧಿಯಲ್ಲಿ ಹಡಗುಗಳ ಸುಗಮ ಸಂಚಾರ ನಡೆಯುತ್ತಿಲ್ಲ. ಸೌದಿ ಅರೇಬಿಯಾ, ಯುಎಇಯಿಂದ ಪೂರೈಕೆ ಸ್ಥಗಿತಗೊಂಡಿರುವುದರಿಂದ ಹೋಟೆಲ್‌ಗಳು ಮತ್ತು ಕೈಗಾರಿಕೆಗಳಂತಹ ವಾಣಿಜ್ಯ ಸಂಸ್ಥೆಗಳಿಗೆ ಎಲ್‌ಪಿಜಿ ಪೂರೈಕೆಯನ್ನು ಸರ್ಕಾರ ಕಡಿತಗೊಳಿಸಿದೆ.

ಇಂಧನ ಸಚಿವಾಲಯದ ಪೆಟ್ರೋಲಿಯಂ ಯೋಜನೆ ಮತ್ತು ವಿಶ್ಲೇಷಣಾ ಘಟಕದ (ಪಿಪಿಎಸಿ) ಪ್ರಕಾರ, ಗೃಹ ಬಳಕೆಯ ಸಿಲಿಂಡರ್‌ಗಳ ಮಾರಾಟ ಮಾರ್ಚ್‌ನಲ್ಲಿ ಶೇ.8.1 ರಷ್ಟು ಕುಸಿದು 2.219 ಮಿಲಿಯನ್ ಟನ್‌ಗಳಿಗೆ ತಲುಪಿದೆ. ವಾಣಿಜ್ಯ ಸಿಲಿಂಡರ್ ಮಾರಾಟ ಶೇ.48 ರಷ್ಟು ಕುಸಿದಿದೆ.ಸಗಟು ಎಲ್‌ಪಿಜಿ ಮಾರಾಟ ಶೇ.75.5 ರಷ್ಟು ಕುಸಿತ ಕಂಡಿದೆ.

ಎಲ್‌ಪಿಜಿ ಪೂರೈಕೆ ಸಹಜವಾಗಿದೆ, ಗೃಹ ಬಳಕೆಯ ಎಲ್‌ಪಿಜಿಗೆ ತೊಂದರೆಯಾಗುತ್ತಿಲ್ಲ ಎನ್ನುವ ಸರ್ಕಾರದ ಪ್ರತಿಪಾದನೆಗಳಿಗೆ ವ್ಯತಿರಿಕ್ತವಾಗಿ ಪಿಪಿಎಸಿ ದತ್ತಾಂಶ ಇದೆ.

# ಡಿ.ಕಾಳೇನಹಳ್ಳಿ ಸಮಗ್ರ ಅಭಿವೃದ್ಧಿಗೆ ಆದ್ಯತೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಟ್ಟಣಕ್ಕೆ ಹೊಂದಿ ಕೊಂಡತಿರುವ ಡಿ.ಕಾಳೇನಹಳ್ಳಿ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಪಟ್ಟಣದಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ನಾಲ್ಕು ರಸ್ತೆಗಳನ್ನು ಕಾಂಕ್ರಿಟ್ ರಸ್ತೆಗಳನ್ನಾಗಿ ಮೇಲ್ದರ್ಜೆ ಗೇರಿಸಲಾಗಿದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಕಸಬಾ ಹೋಬಳಿ ಡಿ.ಕಾಳೇನಹಳ್ಳಿ ಗ್ರಾಮದ ಕೇಂದ್ರಭಾಗದಲ್ಲಿರುವ ಲಕ್ಷ್ಮಿದೇವಿ ದೇವಾಲಯದ ಮುಂಭಾ ಗದ ಪ್ರಾಂಗಣಕ್ಕೆ ಕಾಂಕ್ರಿಟ್ ನೆಲ ಹಾಸು ನಿರ್ಮಾಣಕ್ಕೆ ಭೂಮಿ ಪೂಜೆ ನೇರವೇರಿಸಿ ಮಾತನಾಡಿದ ಅವರು, ಡಿ.ಕಾಳೇನಹಳ್ಳಿ ಜಿಲ್ಲಾಪಂಚಾಯಿತಿ ಕ್ಷೇತ್ರದಿಂದ ತಮ್ಮನ್ನು ರಾಜಕೀಯ ವಾಗಿ ಬೆಳೆಸಿದ ಗ್ರಾಮ ಡಿ.ಕಾಳೇನಹಳ್ಳಿ ಗ್ರಾಮದಲ್ಲಿ ಶೇ.90 ರಷ್ಟು ಅವಶ್ಯವಿ ರುವ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಪಟ್ಟಣದಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಬಿ.ಎಂ.ರಸ್ತೆ, ಮೈಸೂರು ರಸ್ತೆಯಿಂದ ಸಂಪರ್ಕ ಕಲ್ಪಿಸುವ 2 ರಸ್ತೆಗಳು, ತಗ್ಯಮ್ಮ ಬಡ ವಾಣೆಯಿಂದ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಕಾಂಕ್ರಿಟ್ ರಸ್ತೆಗಳನ್ನಾಗಿಸ ಲಾಗಿದೆ. ಸಾರ್ವಜನಿಕರ ಉಪಯೋ ಗಕ್ಕೆ ಲಭ್ಯವಿರುವ ಸಮುದಾಯ ಭವನದ ಹೆಚ್ಚುವರಿ ಕೆಲಸಗಳಿಗಾಗಿ ಮುಂದಿನ ತಿಂಗಳೊಳಗೆ 5 ಲಕ್ಷ ರೂ. ಅನುದಾನ ನೀಡಲಾಗುವುದು. ಶಿಥಿಲಗೊಂಡಿರುವ ರಾಮ ಮಂದಿ ರದ ಅಭಿವೃದ್ಧಿಗಾಗಿ ಶೀಘ್ರ ಅನು ದಾನ ಒದಗಿಸಲಾಗುವುದೆಂದರು.

ಪಟ್ಟಣಕ್ಕೆ ಹೊಂದಿಕೊಂಡತಿರುವ ಗ್ರಾಮದ ಸಂಪರ್ಕ ರಸ್ತೆಗಳ ನಿರ್ಮಾಣದ ವೇಳೆ ಅಕ್ಕಪಕ್ಕದ ಜಮೀ ನಿನ ಮಾಲೀಕರು ಜಾಗ ಬಿಟ್ಟುಕೊಡಬೇಕು, ಅದರಿಂದ ಭೂಮಿಯ ಮೌಲ್ಯ ಹೆಚ್ಚಲಿದೆ ಎಂದರು. ಜೆಜೆಎಂ ಗಾಗಿ ಜಾಗದ ಕೊರತೆಯಿಂದ ಓವರ್ ಹೆಡ್ ಟ್ಯಾಂಕ್ ನಿರ್ಮಾಣವಾಗಿಲ್ಲ. ಗ್ರಾಮಸ್ಥರು ಸೇರಿ ಸೂಕ್ತ ಜಾಗ ಗುರ್ತಿಸಿದ್ದಲ್ಲಿ ಶೀಘ್ರ ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ ನೀರು ಒದಗಿಸಲಾ ಗುವುದೆಂದರು.

ಟಿಪಿಎಸಿಎಂಎಸ್ ನಿರ್ದೇಶಕ ಅನಿಲ್ ಕುಮಾರ್, ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಗದೀಶ್, ಕೆಂಪೇ ಗೌಡ ವೇದಿಕೆ ಅಧ್ಯಕ್ಷ ಆನಂದ್ ಕಾಳೇನಹಳ್ಳಿ, ಪಿಎಸಿಸಿಎಸ್ ಅಧ್ಯಕ್ಷ ಶಂಕರ್, ಮಾಜಿ ಅಧ್ಯಕ್ಷರಾದ ರಂಗ ಸ್ವಾಮಿ, ಮಂಜಪ್ಪ, ಗ್ರಾಮ ಪಂಚಾ ಯಿತಿ ಮಾಜಿ ಸದಸ್ಯ ವೆಂಕಟೇಶ್, ಶಂಕರ್, ಕುಮಾರ್, ಅಡಗೂರು ಗ್ರಾಮದ ನಾರಾಯಣಿ, ಮುಖಂಡ ರಾದ ನಾಗಣ್ಣಯ್ಯ, ಪ್ರಕಾಶ್, ನಾಗೇಂದ್ರ, ಬಾಬು, ಸ್ವಾಮಿ, ಕೆ.ಟಿ.ಚಂದ್ರ, ನಾಗೇಶ್, ಶಿವಪ್ರಕಾಶ್ ಇದ್ದರು.

**ಹಾಸನದ 5ನೇ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ, ರವರ ನ್ಯಾಯಾಲಯದಲ್ಲಿ.**
**ಸಿ.ಮಿಸ್ ನಂ.:1162/2025.**

**ಅರ್ಜಿದಾರರು : 1. ಅನಿಲ್ ಕುಮಾರ್ ಕೆ.ಎನ್. ಬಿನ್ ಲೇಟ್ ಕೆ.ಸಿ. ನಿಂಗಯ್ಯ ಸುಮಾರು 58 ವರ್ಷ, ನಂ.545/7, ಎಸ್.ಜಿ.ಪಿ ರಸ್ತೆ, ಕೆ.ಆರ್.ಪುರಂ, ಹಾಸನ, 2. ಕೆ.ಎನ್. ಜ್ಞಾನೇಂದ್ರ ಬಿನ್ ಲೇಟ್ ಕೆ.ಸಿ.ನಿಂಗಯ್ಯ, ಸುಮಾರು ವರ್ಷ, ಪುಷ್ಪಗಿರಿ ನಿಲಯ, ಗೌರಿಕೊಪ್ಪಲು ಮುಖ್ಯ ರಸ್ತೆ, ಸಿದ್ದೇಶ್ವರ ಟೆಂಪಲ್ ಹಿಂಭಾಗ, ವಿದ್ಯಾನಗರ, ಹಾಸನ, 3. ಸುಮತಿ ಕೆ.ಎನ್. ಬಿನ್ ಲೇಟ್ ಕೆ.ಸಿ.ನಿಂಗಯ್ಯ ಸುಮಾರು ವರ್ಷ, ನಂ.34, ಹುಣಸೆಘಟ್ಟ ಹೆಡ್ ಪೋಸ್ಟ್, ನೊಣವಿನಕೆರೆ ಹೋಬಳಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.**

**ವಿರುದ್ಧ**

**ರೆಸ್ಪಾಂಡೆಂಟರು: ಜನನ ಮತ್ತು ಮರಣ ನೊಂದಣಾಧಿಕಾರಿಗಳು ತಹಶೀಲ್ದಾರ್, ಹಾಸನ ತಾಲ್ಲೂಕು**

**: ಪತ್ರಿಕಾ ಪ್ರಕಟಣೆ :**

**ಅರ್ಜಿದಾರರುಗಳು ಈ ಮೇಲ್ಕಂಡ ಅರ್ಜಿಯನ್ನು ರೆಸ್ಪಾಂಡೆಂಟರ ವಿರುದ್ಧ 1ನೇ ಅರ್ಜಿದಾರರುಗಳ ಅಜ್ಜನಾದ ಹೊಂಗಯ್ಯ ಬಿನ್ ಜುಂಜಯ್ಯ ರವರು ದಿನಾಂಕ : 16/08/1947ರಂದು ಹಾಸನ ತಾಲ್ಲೂಕು, ದುದ್ದ ಹೋಬಳಿ, ದುದ್ದ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆಂದು ಹಾಗೂ ರೆಸ್ಪಾಂಡೆಂಟರು ತಮ್ಮ ಮರಣ ನೊಂದಣೆ ವಹಿಯಲ್ಲಿ ಮೃತರ ದಿನಾಂಕವನ್ನು ನೊಂದಣೆ ಮಾಡಿಕೊಂಡು ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ದಾಖಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ನಮೂದಿಸಿರುವ ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ನಿಮ್ಮ ಪರ ತಕರಾರು ಸಲ್ಲಿಸಲು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯನ್ನು ನೀವುಗಳು ನ್ಯಾಯಾಲಯದಲ್ಲಿ ನೀವುಗಳಾಗಲೀ ಅಥವಾ ನಿಮ್ಮ ಪರ ವಕೀಲರಾಗಲೀ ಖುದ್ದಾಗಿ ದಿನಾಂಕ : 21/04/2026 ರಂದು ಬೆಳಿಗ್ಗೆ 11.00 ಗಂಟೆಗೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ನಿಮ್ಮ ಪರ ಈ ಮೇಲ್ಕಂಡ ಅರ್ಜಿಗೆ ತಕರಾರು ಇರುವುದಿಲ್ಲವೆಂದು ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ. ದಿನಾಂಕ : 10/03/2026ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.**

**ಘನ ನ್ಯಾಯಾಲಯದ ಆದೇಶದ ಮೇರೆಗೆ**
**ಅರ್ಜಿದಾರರುಗಳ ಪರ ವಕೀಲರು : ಶಿರಸ್ತೇದಾರರು, ಹಾಸನದ 5ನೇ ಸಿವಿಲ್ ಜಡ್ಜ್**
**ಸ್ಥಳ : ಹಾಸನ. ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹಾಸನ.**

CMYK CMYK CMYK CMYK

ಸೋಮವಾರ , 20 ಏಪ್ರಿಲ್ 2026

ಪ್ರಜೋದಯ

# ಇಷ್ಟಾರ್ಥ ನೆರವೇರಿಸುವ ಕೆಂಚಾಂಬಿಕೆ ದೊಡ್ಡ ಜಾತ್ರೆ

## ಹರಿಹಳ್ಳಿ ಗ್ರಾಮದಲ್ಲಿ ಮನೆ ಮಾಡಿದ ಸಂಭ್ರಮ । ವಿವಿಧ ಧಾರ್ಮಿಕ ಕೈಂಕರ್ಯ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕಿನ ಕೆ.ಹೊಸಕೋಟೆ ಹೋಬಳಿ ಹರಿಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಹಾಸನಾಂಬೆ ದೇವಿಯ ಹಿರಿಯ ಸಹೋದರಿ ಸುತ್ತಲಿನ 48 ಹಳ್ಳಿಗಳಿಗೆ ಸೇರಿದ ಶ್ರೀ ಕೆಂಚಾಂಬಿಕೆ ದೇವಿಯ ವರ್ಷದ ದೊಡ್ಡ ಜಾತ್ರೆ ಏ. 26ರ ವರೆಗೆ ಹರಿಹಳ್ಳಿ ಗ್ರಾಮದಲ್ಲಿರುವ ಕೆಂಚಾಂಬಿಕೆ ದೇವಸ್ಥಾನದಲ್ಲಿ ನಡೆಯುತ್ತದೆ.

ಜಾತ್ರೆ ಪ್ರಾರಂಭವಾಗುವ ಒಂದು ವಾರ ಮೊದಲು 48 ಹಳ್ಳಿಗಳಲ್ಲೂ ಸುಗ್ಗಿ ಸಾರು ಹಾಕಲಾಗುತ್ತದೆ. ಅದರಂತೆ ಭಾನುವಾರ ಸಾರು ಹಾಕಲಾಯಿತು. ಇಂದಿನಿಂದ 48 ಹಳ್ಳಿಗಳ ವ್ಯಾಪ್ತಿಯಲ್ಲಿ ಹಸಿ ಗೊನೆ ಕಡಿಯುವಂತಿಲ್ಲ, ಮುರಿಯುವಂತಿಲ್ಲ. ಒಗ್ಗರಣೆ ಹಾಕುವಂತಿಲ್ಲ. ರೊಟ್ಟಿ ಮಾಡುವುದು, ಮಾಂಸಾಹಾರ ಮಾಡುವುದು ನಿಷೇಧ ಮಾಡಲಾಗುತ್ತದೆ. ಸಾರು ಹಾಕುವ ಸಂದರ್ಭದಲ್ಲಿ ಗ್ರಾಮದ ಮಹಿಳೆಯರು ಹೊರ ಊರಿನಲ್ಲಿದ್ದಾಗ ಆಕಸ್ಮಿಕವಾಗಿ ಋತುಚಕ್ರಕ್ಕೊಳಗಾದರೆ ಊರಿನೊಳಗೆ ಪ್ರವೇಶಿಸುವಂತಿಲ್ಲ. ಸೂತಕಕ್ಕೆ ಸಿಕ್ಕಿದವರು ಹೊರ ಊರಿಗೆ ತೆರಳುತ್ತಾರೆ. ಈ ಕಟ್ಟು ಪಾಡು ಪುರಾತನ ಕಾಲದಿಂದಲೂ ನಡೆದು ಬರುತ್ತಿದೆ. ದೇವಿಗೆ ಪ್ರಾಣಿ ಬಲಿ ಇಲ್ಲ. ಕೆಂಪು ಅನ್ನದ ಬಲಿ ಅರ್ಪಿಸಲಾಗುತ್ತದೆ.

ದೇವಿಯ ಮೂಲ ದೇವಸ್ಥಾನದಲ್ಲಿ ಭಾನುವಾರ ಪಾದ ಪೂಜೆ, ಸಾರು, ವಸಂತ ಸೇವೆ ಮೂಲಕ ಜಾತ್ರೆ ವಿಧ್ಯುಕ್ತ ಆರಂಭವಾಗಿ. ಏ. 22ರ ಬುಧವಾರ ಉಯ್ಯಾಲೆ ಜಾತ್ರೆ, ಪಾದ ತೂಗುವ ಜಾತ್ರೆ ನಡೆಯಲಿದೆ. ನಂತರ ವಸಂತ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗವಿದೆ. ಏ. 24ರ ಶುಕ್ರವಾರ ಉಕ್ಕುಂದ




ಪೂಜೆ ನೆರವೇರಲಿದೆ.

ಏ.25ರ ಶನಿವಾರ ರಾತ್ರಿ ಮೂಲ ದೇವಸ್ಥಾನದಲ್ಲಿ ಉದ್ವಾರ್ಚನೆ, ಸಪ್ತಮಾತೃಕಾ ಸಹಿತ ಶ್ರೀ ಕೆಂಚಾಂಬಿಕೆಗೆ ಮಹಾಪೂಜೆ, ಸುಗ್ಗಿ, ಮಹಾಮಂಗಳಾರತಿ ಜರುಗಲಿದೆ. ಏ.26ರ ಬೆಳಿಗ್ಗೆ ಮೂಲ ದೇವಸ್ಥಾನದಿಂದ ಹೊರಡುವ ದೇವಿಯ ಒಡವೆ, ಮುಖ, ಪಾದುಕೆ, ಬೆಳ್ಳಿ ಹೆಡಿಗೆ, ಪುಷ್ಪ, ಉತ್ಸವ ಮೂರ್ತಿಗಳ ಮೆರವಣಿಗೆ ದೇವಾಲಯಕ್ಕೆ ತಲುಪಿ ಅಲಂಕಾರ, ಅಭಿಷೇಕ, ಪೂಜೆ, ಬಲಿ ಪ್ರದಾನದ ನಂತರ ಮಹಾಮಂಗಳಾರತಿ ಸಂಪನ್ನವಾಗುತ್ತದೆ. ಮಧ್ಯಾಹ್ನ 2 ಗಂಟೆಗೆ ಬನ್ನಿ ಮಂಟಪದಲ್ಲಿ ಶ್ರೀ ದೇವಿ ಹಾಗು ವೀರಭದ್ರ ದೇವರ (ಭಂಟ) ಸಮಾಗಮ ಆಗಲಿದೆ. ರಾತ್ರಿ 10.30ರ ವರೆಗೆ ಪಾದ ನಮಸ್ಕಾರ ನೆರವೇರಿದ ನಂತರ ಮಂಗಳಾರತಿ, ಅಲಂಕಾರ ವಿಸರ್ಜನೆಗೊಂಡು ಮೂಲ ದೇವಸ್ಥಾನಕ್ಕೆ (ಬನ) ಶ್ರೀದೇವಿಯ ಮೆರವಣಿಗೆ ಸೇರಿದ ಬಳಿಕ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

**ಹಿನ್ನಲೆ:** ಹಾಸನಾಂಬ ಸೇರಿ ಒಟ್ಟು ಏಳು

> **ಶ್ರೀ ಕೆಂಚಾಂಬಿಕೆಯ ಜಾತ್ರೆ ಸುತ್ತಲಿನ 48ಹಳ್ಳಿಗಳಿಗೆ ವಿಶೇಷವಾದರೂ ಪಕ್ಕದ ಸಕಲೇಶಪುರ, ಬೇಲೂರು, ಅರಕಲಗೂಡು, ಕೊಡಗಿನ ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಜಾತ್ರೆಯನ್ನಾಧರಿಸಿ ಗ್ರಾಮ ದೇವರ ಪೂಜೆ ಉತ್ಸವಾದಿಗಳು ನಡೆಯುವುದು ಪ್ರತೀತಿ. ನಾವು ಈ ದೇವಿಯನ್ನು ಪರಂಪರಾಗತವಾಗಿ ಪೂಜಿಸುತ್ತಾ ಬಂದಿದ್ದು, ದೇವಿಯು ಬೇಡಿ ಬಂದ ಭಕ್ತಾದಿಗಳ ಮನೋರಥವನ್ನು ಈಡೇರಿಸುತ್ತಾ ಹರಸುತ್ತಾಳೆಂಬ ನಂಬಿಕೆಯಿದೆ.**
>
> **-ಹೆಚ್.ಎನ್.ರಾಮಸ್ವಾಮಿ, ಪ್ರಧಾನ ಅರ್ಚಕ**

ಸಹೋದರಿಯರಲ್ಲಿ ಹಿರಿಯವರಾದ ಕೆಂಚಾಂಬ (ಬ್ರಾಹ್ಮೀದೇವಿ) ಹರಿಹಳ್ಳಿಯಲ್ಲಿ ನೆಲೆಸಿದ್ದಾರೆ. ಎರಡನೇ ಮಹೇಶ್ವರಿ ದೇವಿ, ಮೂರನೇ ಕೋಮಾರಿ ದೇವಿ, ನಾಲ್ಕನೇ ವಾರಾಹಿ ದೇವಿ ಎಂಬುವವರು ಹಾಸನಾಂಬ ದೇವಾಲಯದಲ್ಲಿ ತ್ರಿಮೂರ್ತಿಗಳಾಗಿ ನೆಲೆಸಿದ್ದಾರೆ. ಐದನೇ ವೈಷ್ಣವಿ ದೇವಿ, ಆರನೇ ಇಂದ್ರಾಣಿ ದೇವಿ ಮತ್ತು ಏಳನೇ ಚಾಮುಂಡಿ ದೇವಿಯರು ಹಾಸನದ ದೇವಿಗೆರೆ ಕೊಳದಲ್ಲಿ ನೆಲೆಸಿದ್ದಾರೆ. ಆದ್ದರಿಂದ ಹಾಸನಾಂಬ ದೇವಾಲಯ, ಕೆಂಚಾಂಬ ದೇವಾಲಯ ಮತ್ತು ದೇವಿಗೆರೆಗೆ ಪೂರಕ ಸಂಬಂಧವಿದೆ.

ಮಹಿಷಾಸುರನೆಂಬ ರಾಕ್ಷಸನನ್ನು ಚಾಮುಂಡೇಶ್ವರಿ ಸಂಹರಿಸಿದ ನಂತರ, ಅವನ ಮಂತ್ರಿಯಾಗಿದ್ದ ರಕ್ತಬೀಜಾಸುರ ಎಂಬ ರಾಕ್ಷಸ ದೇವಿಯಿಂದ ತಪ್ಪಿಸಿಕೊಂಡು ಈ ಭಾಗಕ್ಕೆ ಬರುತ್ತಾನೆ. ಅವನ ಉಪಟಳ ದಿನೇ ದಿನೇ ತೀಕ್ಷ್ಣವಾಗಿ ಇಲ್ಲಿಯ ಪ್ರಾಣಿ, ಪಶು, ಪಕ್ಷಿಗಳಾದಿಯಾಗಿ ಮಾನವರಿಗೂ ಬದುಕುವುದೇ ಕಷ್ಟವೆಂಬ ಪರಿಸ್ಥಿತಿ ನಿರ್ಮಾಣ ವಾಗುತ್ತದೆ. ಈ ಸಂದರ್ಭದಲ್ಲಿ ಮಾನವರ ಮೊರೆಗೆ ಓಗೊಟ್ಟು ರಕ್ತ ಬೀಜಾಸುರನ ಸಂಹಾರಕ್ಕೆಂದು ಹರಿಹಳ್ಳಿಯಲ್ಲಿ ಆದಿಶಕ್ತಿ ಅವತರಿಸುತ್ತಾಳೆ. ಕೆಂಚಾಂಬಿಕಾ ದೇವಿಯು ಸರಸ್ವತಿ, ಪಾರ್ವತಿ ಹಾಗು ಲಕ್ಷ್ಮಿಯರ ಸಂಪೂರ್ಣ ಶಕ್ತಿ ಪಡೆದು ಇಲ್ಲಿಗೆ ಬಂದು, ರಾಕ್ಷಸರೊಡನೆ ಯುದ್ಧ ಮಾಡಿ ಅನೇಕರನ್ನು ಸಂಹಾರ ಮಾಡುತ್ತಾಳೆ. ಆದರೆ ರಕ್ತ ಬೀಜಾಸುರನನ್ನು ಕೊಲ್ಲುವುದು ಸುಲಭದ ಮಾತಾಗಿರುವುದಿಲ್ಲ. ಈತ ಬ್ರಹ್ಮನಿಂದ ವರ ಪಡೆದವನಾಗಿರುತ್ತಾನೆ. ಇವನ ಒಂದು ಹನಿ ರಕ್ತ ನೆಲಕ್ಕೆ ಬಿದ್ದರೆ ಅವನಷ್ಟೆ ಶಕ್ತಿಯುಳ್ಳ ಸಹಸ್ರ ರಾಕ್ಷಸರು ಹುಟ್ಟುತ್ತಿದ್ದರು. ಹೀಗಾಗಿ ಆದಿಶಕ್ತಿ ಕೆಂಚಾಂಬಿಕೆಯು ಈತನನ್ನು ಉಪಾಯದಿಂದ ಸಂಹರಿಸುವ ಸಂಕಲ್ಪ ಮಾಡಿ, ತನ್ನ ನಾಲಿಗೆಯನ್ನು ನೆಲದ ಮೇಲೆ ಹಾಸಿ ಅದರ ಮೇಲೆ ರಾಕ್ಷಸ ಬರುವಂತೆ ಮಾಡಿ ಕೊಂದಳು. ಹೀಗೆ ರಕ್ತ ಬೀಜಾಸುರನ ಸಂಹಾರ ಮಾಡಿದ ಸ್ಥಳದಲ್ಲೇ ಕೆಂಚಾಂಬಿಕೆ ನೆಲೆಸಿದ್ದಾಳೆ ಎಂದು ಇತಿಹಾಸ ಹೇಳುತ್ತದೆ. ಈ ಕತೆಗೆ ಪೂರಕವಾಗಿ ಇಲ್ಲಿನ ಮಣ್ಣು ಕೆಂಪಾಗಿದೆ ಎಂದು ಪ್ರಧಾನ ಅರ್ಚಕ ಹೇಳುತ್ತಾರೆ.



## ತೊಳಸಿ ಗ್ರಾಮದ ಬಸವೇಶ್ವರ ದೇವಾಲಯ ಉದ್ಘಾಟನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಾಸನ ಮತ್ತು ಮಂಡ್ಯ ಜಿಲ್ಲೆಯ ಗಡಿ ಗ್ರಾಮವಾದ ಕಿಕ್ಕೇರಿ ಹೋಬಳಿ ತೊಳಸಿ ಗ್ರಾಮದ ಐತಿಹಾಸಿಕ ಶ್ರೀ ಬಸವೇಶ್ವರ ದೇವಸ್ಥಾನ ಉದ್ಘಾಟನೆ ಸಮಾರಂಭ ಭಾನುವಾರ ಅರ್ಥಪೂರ್ಣವಾಗಿ ನೆರವೇರಿತು.

ಕೃಷಿ ಸಚಿವ ಎನ್.ಚಲುವ ರಾಯಸ್ವಾಮಿ ಅವರು ಮಾತನಾಡಿ, ಗ್ರಾಮದಲ್ಲಿ ಎಲ್ಲರೂ ಪ್ರೀತಿ ಸೋದರತ್ವದಿಂದ ಬಾಳ್ವೆ ಮಾಡಬೇಕು. ಎಲ್ಲರೂ ಒಂದೇ ಎಂಬ ಭಾವನೆ ಯಿಂದ ಸಹಜೀವನ ನಡೆಸಬೇಕು. ಇಂತಹ ಐತಿಹಾಸಿಕ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿಕೊಂಡು ಗ್ರಾಮಸ್ಥರು ಒಗ್ಗಟ್ಟಿನಿಂದ ಸ್ನೇಹಮಯಿ ಜೀವನವನ್ನು ನಡೆಸಬೇಕೆಂದು ಸಲಹೆ ನೀಡಿದರು.

ನಮ್ಮ ಕಾಂಗ್ರೆಸ್ ಸರ್ಕಾರವು ಯಾವುದೇ ತರಹದ ಪಕ್ಷ, ಜಾತಿ ಭೇದ ಮಾಡದೆ ಪ್ರತಿಯೊಂದು ಮನೆಗೂ ಐದು ಗ್ಯಾರಂಟಿಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಿದೆ. ಪಂಚ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಬಡವರ ಪರ ವಾಗಿದ್ದೇವೆ ಎಂಬುದನ್ನು ನಾವು ಸಾಬೀತು ಪಡಿಸಿದ್ದೇವೆ. ತೊಳಸಿ ಗ್ರಾಮದಲ್ಲಿ ಐತಿಹಾಸಿಕ ಹಿನ್ನಲೆ ಹೊಂದಿರುವ ಶ್ರೀ ಬಸವೇಶ್ವರ ಸ್ವಾಮಿಯ ದೇವಸ್ಥಾನವನ್ನು ನಿರ್ಮಾಣ ಮಾಡುವಲ್ಲಿ ಶ್ರಮಿಸಿರುವ ಗ್ರಾಮದ ಹಿರಿಯ ಮತ್ತು ಕಿರಿಯ ಮುಖಂಡರಿಗೆ ಧನ್ಯವಾದ ಸಲ್ಲಿಸು ತ್ತೇನೆಂದರು. ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಬಿ. ಪ್ರಕಾಶ್, ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಸುರೇಶ್, ಎಂ.ಬಿ.ಹರೀಶ್, ಎಸ್.ಅಂಬರೀಶ್, ರಾಮಕೃಷ್ಣೇಗೌಡ, ಮಂಜೇಗೌಡ, ರಾಮಣ್ಣ, ಕೊಣಪ್ಪನ ರಾಮಣ್ಣ, ಮರಿಯಣ್ಣ ರಾಮಣ್ಣ ಇತರರಿದ್ದರು.

# ಕಾಂಗ್ರೆಸ್ ದೇಶದ ದರಿದ್ರ ಪಕ್ಷ ಎಂದು ಸಾಬೀತು

» **ಮೊದಲನೇ ಪುಟದಿಂದ**

ಬೇಕೆಂದು ಅವರಿಗೆ ಅನ್ನಿಸಲಿಲ್ಲ. 1996ರಲ್ಲಿ ಮೊದಲ ಬಾರಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ನಂತರ ಅಟಲ್ ಬಿಹಾರಿ ವಾಜಪೇಯಿ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೆ ಯತ್ನಿಸಿದರೂ ವಿನಾಶಕಾರಿ ಮನಸ್ಥಿತಿಯ ಕಾಂಗ್ರೆಸ್‌ನವರು ಅದಕ್ಕೆ ಅವಕಾಶ ನೀಡಲಿಲ್ಲವೆಂದು ಆರೋಪಿಸಿದರು.

2010ರಲ್ಲಿ ರಾಜ್ಯಸಭೆಯಲ್ಲಿ ಮಸೂದೆ ಪಾಸಾಗಿದ್ದರೂ ಲೋಕಸಭೆಯಲ್ಲಿ ಅದನ್ನು ಮಂಡಿಸಲಿಲ್ಲ. ಹೀಗಾಗಿ ನರೇಂದ್ರ ಮೋದಿ ಸರ್ಕಾರ 2023ರಲ್ಲಿ ಮಸೂದೆ ಅಂಗೀಕರಿಸಿತು. 2034ರ ಚುನಾವಣೆಗೆ ಮಸೂದೆ ಜಾರಿಗೊಳಿಸಬೇಕೆಂದು ಮೊದಲು ನಿರ್ಧರಿಸಲಾಗಿತ್ತಾದರೂ ಚುನಾವಣೆಗಳಿಂದ ಮಹಿಳೆಯರು ಮತ್ತೆ 10 ವರ್ಷ ಹಿಂದುಳಿಯುತ್ತಾರೆಂದು 2029ಕ್ಕೆ ಜಾರಿಗೊಳಿಸಲು ಪ್ರಯತ್ನಿಸಿದರು. ಆದರೆ ಮಹಿಳೆಯರ ಏಳಿಗೆ ಸಹಿಸದ ಕಾಂಗ್ರೆಸ್ ಮಸೂದೆಗೆ ವಿರೋಧಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಸಿಕ್ಕಾಗ ದೇಶದ ಜನಸಂಖ್ಯೆ 35 ರಿಂದ 40 ಕೋಟಿ ಇತ್ತು. 2026ರಲ್ಲಿ ಸುಮಾರು ಮೂರು ಪಟ್ಟು ಅಂದರೆ 146-147 ಕೋಟಿ ದಾಟಿದೆ. ಆದರೆ ಲೋಕಸಭಾ ಸದಸ್ಯರ ಸಂಖ್ಯೆ 543 ಇದೆ. ಮುಂದುವರೆದಿದೆ. ಇದರಿಂದ ಜನಸಂಖ್ಯೆಯ ಅನುಪಾತಕ್ಕೆ ಲೋಕಸಭಾ ಸದಸ್ಯರ ಸಂಖ್ಯೆ ಹೆಚ್ಚಾಗದೇ ಇರುವುದರಿಂದ ಆಡಳಿತ ಕಷ್ಟವಾಗುತ್ತಿದೆ. ಲೋಕಸಭಾ ಸ್ಥಾನವನ್ನು 850ಕ್ಕೆ ಹೆಚ್ಚಿಸಲು ಕಾಂಗ್ರೆಸ್‌ಗೆ ಇಷ್ಟವಿಲ್ಲ. ಪ್ರತಿ 10 ವರ್ಷಕ್ಕೊಮ್ಮೆ ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕೆಂದು ಸಂವಿಧಾನ ಹೇಳಿದೆ. ಪ್ರತಿ ರಾಜ್ಯದಲ್ಲಿ ಶೇ.50 ರಷ್ಟು ಕ್ಷೇತ್ರಗಳ ಸಂಖ್ಯೆ ಹೆಚ್ಚಿಸುತ್ತೇವೆಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದರೂ ಕಾಂಗ್ರೆಸ್ ಅರಿಯುತ್ತಿಲ್ಲ. ದೇಶದ ಪ್ರತಿ ಮಹಿಳೆಯರು ಕಾಂಗ್ರೆಸ್ ಹಾಗು ಮಿತ್ರ ಪಕ್ಷಗಳಿಗೆ ಮುಂದೆ ತಕ್ಕ ಪಾಠ ಕಲಿಸುತ್ತಾರೆಂದು ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ನಗರ ಮಂಡಲ ಅಧ್ಯಕ್ಷ ಯೋಗೀಶ್ ಮಂಜಣ್ಣ, ವಕ್ತಾರ ಆರ್.ಮೋಹನ್, ಮಾಧ್ಯಮ ಪ್ರಮುಖ್ ಬಿ.ವೇದಾವತಿ ಹಾಗು ನಗರ ವಕ್ತಾರ ದಯಾನಂದ್ ಹಾಜರಿದ್ದರು.



**ಅರಕಲಗೂಡು: ತಾಲ್ಲೂಕು ಹೆಬ್ಬಾಲೆ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.99 ರಷ್ಟು ಫಲಿತಾಂಶ ಬಂದಿದ್ದು, ಶಾಸಕ ಎ. ಮಂಜು ಅವರು ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು. ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರು, ಪ್ರಾಂಶುಪಾಲ ಹಾಗು ಉಪನ್ಯಾಸಕರು ಉಪಸ್ಥಿತರಿದ್ದರು.**



**ಅರಕಲಗೂಡು: ತಾಲ್ಲೂಕಿನ ಕೊಣನೂರು ಬಿ.ಎಂ.ಶೆಟ್ಟಿ ಸರ್ಕಾರಿ ಪದವಿ ಕಾಲೇಜಿನಲ್ಲಿ ಭಾರತೀಯ ರೆಡ್ ಕ್ರಾಸ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಆರೋಗ್ಯ ಶಿಬಿರ ಹಾಗು ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಶಾಸಕ ಎ.ಮಂಜು ಪಾಲ್ಗೊಂಡಿದ್ದರು. ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ.ಮೋಹನ್, ನಂಜುಂಡಸ್ವಾಮಿ, ಬಸವರಾಜ್, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಚೌಡೇಗೌಡ, ಸದಸ್ಯ ಯೋಗೇಶ್ ಇತರರಿದ್ದರು.**

# ಸೋಲುವ ಸೂಚನೆ ಇದ್ದರೂ ತರಾತುರಿ: ಡಿ.ಕೆ.ಶಿ.

• ಪ್ರಜೋದಯ ವರದಿ

**ಬೆಂಗಳೂರು:** ಕ್ಷೇತ್ರ ಪುನರ್‌ವಿಂಗಡಣೆಗೆ ವಿರೋಧ ಇರುವ ಕಾರಣಕ್ಕೆ ಮಹಿಳಾ ಮೀಸಲಾತಿ ಮಸೂದೆಗೆ ಸೋಲಾಗುತ್ತದೆ ಎನ್ನುವುದು ಗೊತ್ತಿದ್ದೂ ಕೇಂದ್ರ ಸರ್ಕಾರ ತರಾತುರಿಯಲ್ಲಿ ಮಸೂದೆ ಮಂಡಿಸಿತ್ತು. ಬಿಜೆಪಿ ನಿಜವಾದ ಮಹಿಳಾ ವಿರೋಧಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಟೀಕಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲಾ ಪಕ್ಷದಲ್ಲೂ ಪ್ರತಿನಿಧಿಗಳು ಇದ್ದಾರೆ. ಜನರಿಂದ ಆಯ್ಕೆಯಾಗಿದ್ದಾರೆ. ಮಹಿಳಾ ಮೀಸಲಾತಿ ಮಸೂದೆ ಯಾರೊಬ್ಬರ ಆಸ್ತಿಯಲ್ಲ. ಅದು ದೇಶದ ಆಸ್ತಿ. ಮೀಸಲಾತಿ ಮಸೂದೆ ಕುರಿತು ವಿಸ್ತೃತ ಚರ್ಚೆ ಮಾಡಬೇಕಿತ್ತು. ಕೆಲ ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿರುವ ಹೊತ್ತಿನಲ್ಲೇ ಅವಸರ ತೋರಿದರು. ಮಸೂದೆ ಸೋಲಿನಿಂದ ಬಿಜೆಪಿಗೆ ಮುಖಭಂಗವಾಗಿದೆ. ಇಂಡಿಯಾ ಒಕ್ಕೂಟಕ್ಕೆ ಜಯವಾಗಿದೆ ಎಂದರು.

ಸಂವಿಧಾನ ತಿದ್ದುಪಡಿ ಮಾಡುವಾಗ ಸರ್ವಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು. ಬಿಜೆಪಿಯದು ಹಿಟ್ಲರ್ ಆಡಳಿತ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕ್ಷೇತ್ರ ವಿಂಗಡಣೆ



ವಿರುದ್ಧ ಧ್ವನಿ ಎತ್ತಿದ್ದಾರೆ. ದಕ್ಷಿಣ ಭಾರತದ ಕ್ಷೇತ್ರಗಳನ್ನು ಕಡಿತಗೊಳಿಸಿ, ಉತ್ತರಕ್ಕೆ ಹೆಚ್ಚಿಸುವ ಹುನ್ನಾರದ ವಿರುದ್ಧ ದಕ್ಷಿಣದ ಎಲ್ಲಾ ಮುಖ್ಯಮಂತ್ರಿಗಳ ಹೋರಾಟಕ್ಕೆ, ಪ್ರಜಾಪ್ರಭುತ್ವಕ್ಕೆ ಜಯ ಸಿಕ್ಕಿದೆ. ಮಹಿಳೆಯರ ಪರವಾಗಿ ಕಾಂಗ್ರೆಸ್ ಹಾಗು ಇಂಡಿಯಾ ಒಕ್ಕೂಟ ನಿಂತಿದೆ ಎಂದು ಹೇಳಿದರು.

ಮಹಿಳಾ ಮೀಸಲಾತಿ ಕಾಂಗ್ರೆಸ್ ಕೂಸು. ಜಾರಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇ ಕಾಂಗ್ರೆಸ್. ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಸಿದ್ಧಪಡಿಸಲಾಗಿದ್ದ ಮಹಿಳಾ ಮೀಸಲಾತಿ ಮಸೂದೆ ರಾಜ್ಯಸಭೆಯಲ್ಲಿ ಅನುಮೋದನೆ ಪಡೆದಿತ್ತು. ಹಿಂದೆ ರಾಜೀವ್ ಗಾಂಧಿ ಸ್ಥಳೀಯ ಸಂಸ್ಥೆಗಳಲ್ಲಿ ಶೇ. 50 ರಷ್ಟು ಮೀಸಲಾತಿ ತಂದಿದ್ದರು ಎಂದರು.

**ಕರಾಳ ಇತಿಹಾಸ ಮರುಕಳಿಸಿದೆ**

ಮಹಿಳಾ ವಿರೋಧಿ ಮನಸ್ಥಿತಿಯನ್ನು ಕಾಂಗ್ರೆಸ್ ಹೊಂದಿದೆ. ತಿದ್ದುಪಡಿ ಮಸೂದೆ ಸೋಲುವ ಮೂಲಕ ಲೋಕಸಭೆಯಲ್ಲಿ ಮೂವತ್ತು ವರ್ಷಗಳ ಹಿಂದಿನ ಕರಾಳ ಇತಿಹಾಸ ಮತ್ತೆ ಮರುಕಳಿ ಸಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುಳ್ಳು ಹೇಳುವ ಮುನ್ನ ವಾಸ್ತವ ಹಾಗು ಕಾನೂನು ತಿಳಿದುಕೊಳ್ಳಿ. ಕಾಂಗ್ರೆಸ್ ವಿರೋಧಿಸಿದ್ದು ಮಹಿಳಾ ಮೀಸಲಾತಿಯನ್ನಲ್ಲ, ದಕ್ಷಿಣ ಭಾರತದ ಕತ್ತು ಹಿಸುಕುವ ಕ್ಷೇತ್ರ ಪುನರ್‌ವಿಂಗಡಣೆ ಮಸೂದೆಯನ್ನು. ಇವೆರಡರ ವ್ಯತ್ಯಾಸ ಅರಿಯದಷ್ಟು ಅಜ್ಞಾನವೇ ಎಂದು ಪ್ರಶ್ನಿಸಿದರು. 1996ರಲ್ಲೂ ಹೀಗೇ ಆಗಿತ್ತು. ಮೂರು ದಶಕಗಳ ನಂತರವೂ ಕಾಂಗ್ರೆಸ್ ಪಕ್ಷದ ಮಹಿಳಾ ವಿರೋಧಿ ಮನಸ್ಥಿತಿ ಕೊಂಚವೂ ಬದಲಾಗಿಲ್ಲ ಎನ್ನುವುದಕ್ಕೆ ಲೋಕಸಭೆ ಮತ್ತೊಮ್ಮೆ ಸಾಕ್ಷಿಯಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

## ಜಮೀನಿಗೆ ತೆರಳುವ ರಸ್ತೆಗೆ ವಿನಾಕಾರಣ ಅಡ್ಡಿ: ಆರೋಪ

» **ಮೊದಲನೇ ಪುಟದಿಂದ**

ಯಶೋಧ ಅವರು ಮಾತನಾಡಿ, ರಸ್ತೆ ನಿರ್ಮಾಣಕ್ಕೆ ನನ್ನ ಜಮೀನನ್ನು ಕೂಡ ಬಿಟ್ಟುಕೊಟ್ಟಿದ್ದೇನೆ. ಇಲ್ಲಿವರೆಗೆ ರಸ್ತೆ ಇಲ್ಲದ್ದರಿಂದ ಜಮೀನನ್ನು ಪಾಳು ಬಿಡಲಾಗಿದೆ. ನಮ್ಮ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡಿ ತಿರುಗಾಡಲು ತೊಂದರೆ ನೀಡುತ್ತಾ ಅವ್ಯಾಚ್ಯ ಪದ ಬಳಸಿ ನಿಂದಿಸುತ್ತಿದ್ದಾರೆ. ಜಮೀನಿಗೆ ಹೋಗುವ ಸಂದರ್ಭದಲ್ಲಿ ಕತ್ತಿ ಮತ್ತಿತರ ವಸ್ತುಗಳನ್ನು ತೆಗೆದುಕೊಂಡು ಹೋಗುವುದು ಸಾಮಾನ್ಯ. ಅದನ್ನೇ ನೆಪ ಮಾಡಿಕೊಂಡು ಕೊಲೆಗೆ ಯತ್ನಿಸುತ್ತಿದ್ದಾರೆಂದು ಆರೋಪ ಮಾಡುತ್ತಿರುವುದು ಸುಳ್ಳು. ನಮ್ಮಿಂದ ಅವರಿಗೆ ಯಾವುದೇ ರೀತಿಯ ಜೀವ ಬೆದರಿಕೆ ಇಲ್ಲವೆಂದರು. ರೈತ ದ್ಯಾವಪ್ಪ ಅವರು ಮಾತನಾಡಿ, ಈಗಿರುವ ರಸ್ತೆಯು ನೂರಾರು ವರ್ಷಗಳಿಂದ ಕಾಲುದಾರಿಯಾಗಿತ್ತು. ಜಮೀನು ಇರುವ ಸ್ಥಳದಿಂದ ಮುಖ್ಯ ರಸ್ತೆಗೆ ಸುಮಾರು ಒಂದು ಕಿ.ಮೀ.ದೂರವಿರುವುದರಿಂದ ಭತ್ತ ಹಾಗು ಇನ್ನಿತರ ಬೆಳೆ ಬೆಳೆಯಲು ಕಷ್ಟವಾಗುತ್ತಿದ್ದರಿಂದ ಜಮೀನು ಮಾಲೀಕರ ಒಪ್ಪಿಗೆ ಮೇರೆಗೆ ರಸ್ತೆ ನಿರ್ಮಿಸಿಕೊಂಡಿದ್ದೇವೆ. ಮತ್ತೆ ಇವರೇನಾದರೂ ತೊಂದರೆ ನೀಡಿದರೆ ನಮ್ಮ ಜಮೀನುಗಳನ್ನು ಮಾರಾಟ ಮಾಡಲು ಸಿದ್ದರಿದ್ದೇವೆಂದರು.

ಗ್ರಾಮದ ಉಮೇಶ್, ತಮ್ಮಣ್ಣ, ಪುಟ್ಟಮ್ಮ, ಉಪೇಂದ್ರ ಇತರರಿದ್ದರು.

# ಅಂಬೇಡ್ಕರ್ ಜಯಂತಿಯಲ್ಲಿ ಲೋಪ: ಬೆಂಗಳೂರು ಚಲೋ

• ಪ್ರಜೋದಯ ವರದಿ

**ಬೇಲೂರು:** ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆಯಲ್ಲಿ ಲೋಪ ಎಸಗಿರುವ ತಾಲ್ಲೂಕು ಆಡಳಿತದ ಕ್ರಮ ಖಂಡಿಸಿ ಹಾಗು ತಹಶೀಲ್ದಾರ್ ವರ್ಗಾವಣೆಗೆ ಆಗ್ರಹಿಸಿ ಬೆಂಗಳೂರು ಚಲೋ ನಡೆಸಲಾಗುವುದೆಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಪರ್ವತಯ್ಯ ಅವರು ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಹೈಸ್ಕೂಲ್ ಮೈದಾನದಲ್ಲಿ ಕಾರ್ಯಕ್ರಮ ಮಾಡಲು ನಿರ್ಧರಿಸಲಾಗಿತ್ತು. ಆದರೆ ಅಧಿಕಾರಿಗಳು ಸಮಾಜದ ಅಭಿಪ್ರಾಯ ಕಡೆಗಣಿಸಿದ್ದಾರೆ. ಅದರಿಂದ ಅಂಬೇಡ್ಕರ್ ಅನುಯಾಯಿಗಳ ಭಾವನೆಗಳಿಗೆ ಧಕ್ಕೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಅವಮಾನ ಖಂಡಿಸಿ ತಹಶೀಲ್ದಾರ್ ಕಚೇರಿ ಎದುರು ನಿರಂತರ ಪ್ರತಿಭಟನೆ ನಡೆಯುತ್ತಿದ್ದು, ಸ್ಥಳೀಯ ಶಾಸಕರು ಹೋರಾಟಕ್ಕೆ ಬೆಂಬಲ ನೀಡಿದ್ದಾರೆ. ತಹಶೀಲ್ದಾರ್ ಇದುವರೆಗೆ ಯಾವುದೇ ಸ್ಪಷ್ಟನೆ ನೀಡದ ಹಿನ್ನಲೆಯಲ್ಲಿ ಅವರನ್ನು ತಕ್ಷಣ ಅಮಾನತು ಮಾಡಬೇಕೆಂಬುದು




ನಮ್ಮ ಒತ್ತಾಯವಾಗಿದೆ ಎಂದರು.

ಏ.20ರ ಸೋಮವಾರ ತಾಲ್ಲೂಕು ಛಲವಾದಿ ಘಟಕದ ನಿಯೋಗವು ಬೆಂಗಳೂರಿಗೆ ತೆರಳಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗು ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಲಿದೆ. ಅಲ್ಲಿ ನ್ಯಾಯ ದೊರೆಯದಿದ್ದರೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಾಗು ಬೆಂಗಳೂರು ಚಲೋ ನಡೆಸಲಾಗುವುದೆಂದರು.

ಪುರಸಭೆ ಮಾಜಿ ಸದಸ್ಯ ಬಿ.ಎಸ್.ಮಂಜುನಾಥ್ ಅವರು ಮಾತನಾಡಿ, ಆಹ್ವಾನವಿಲ್ಲದೆ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಪ್ರತಿಭಟನಾ ಸ್ಥಳಕ್ಕೆ ಬಂದು ಗೊಂದಲ ಸೃಷ್ಟಿಸಿದ್ದಾರೆಂದು ಆರೋಪಿಸಿದರು. ಅವರು ಸಮಯ ಸಾಧಕ ರಾಜಕಾರಣಿಯಾಗಿದ್ದು, ಸಮಾಜದ ಯುವಕರನ್ನು ಬಳಸಿಕೊಂಡು ರಾಜಕೀಯ ಲಾಭಕ್ಕಾಗಿ ಹೋರಾಟವನ್ನು ದಿಕ್ಕುತಪ್ಪಿಸುವ ಯತ್ನ ಮಾಡುತ್ತಿದ್ದಾರೆಂದು ಟೀಕಿಸಿದರು.

ಶಾಸಕರು ಪುರಸಭೆ ಸಭೆಯಲ್ಲಿ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಲು ಸೂಚಿಸಿದ್ದರು. ತಹಶೀಲ್ದಾರ್ ಅದನ್ನು ಪಾಲಿಸದಿದ್ದರೆ ಅದರ ಹೊಣೆಗಾರಿಕೆಯನ್ನು ಶಾಸಕರ ಮೇಲೆ ಹಾಕುವುದು ಸರಿಯಲ್ಲವೆಂದು ಪ್ರಶ್ನಿಸಿದರು.

ಅಂಬೇಡ್ಕರ್ ಯಾವುದೇ ಒಂದು ಸಮಾಜಕ್ಕೆ ಸೀಮಿತರಲ್ಲ, ಎಲ್ಲರೂ ಗೌರವ ಸಲ್ಲಿಸಬಹುದು. ಆದರೆ ಉದ್ದೇಶಪೂರ್ವಕವಾಗಿ ಶಾಸಕರನ್ನೇ ಗುರಿಯಾಗಿಸಿ ಧಿಕ್ಕಾರ ಕೂಗುವುದು ಸರಿಯಲ್ಲವೆಂದು ಹೇಳಿದರು.

ಇಂತಹ ಸಂದರ್ಭ ಸಾಧಕ ರಾಜಕಾರಣಿಗಳಿಗೆ ಯುವಕರು ಬಲಿಯಾಗಬಾರದು. ಸ್ವಾಭಿಮಾನದಿಂದ ಬದುಕಿ, ಒಗ್ಗಟ್ಟಿನಿಂದ ಮುಂದೆ ಸಾಗಬೇಕೆಂದು ಮನವಿ ಮಾಡಿದರು. ಮುಖಂಡರಾದ ಮಹೇಶ್ವರಪ್ಪ, ಡಿಎಸ್‌ಎಸ್ ತಾಲ್ಲೂಕು ಸಂಚಾಲಕ ಸಿದ್ದರಾಜು, ಛಲವಾದಿ ಉಪಾಧ್ಯಕ್ಷ ಶಿವಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮನೆ ಬೀಗ ಮುರಿದು ಕಳವು

**ಹಾಸನ:** ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು, ಬೆಳ್ಳಿ ಆಭರಣ ಸೇರಿ 90 ಸಾವಿರ ರೂ. ಮೌಲ್ಯದ ಸಾಮಾಗ್ರಿ, ಕಳವು ಮಾಡಿರುವ ಘಟನೆ ತಾಲ್ಲೂಕಿನ ಬಸವನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸಿ.ಎಸ್.ದಿನೇಶ್ ಅವರ ಮನೆಯಲ್ಲಿ ಏ.17ರ ರಾತ್ರಿ ಕಳ್ಳತನ ನಡೆದಿದೆ. ಕುಟುಂಬ ಸದಸ್ಯರೆಲ್ಲರೂ ಹಳೆಯ ಮನೆಗೆ ಬೀಗ ಹಾಕಿ ಹೊಸ ಮನೆಗೆ ತೆರಳಿದ್ದರು. ಮಾರನೇ ದಿನ ಬೆಳಿಗ್ಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ತಿಳಿದಿದೆ. ಕಳ್ಳರು ಬೀರುವಿನಲ್ಲಿಟ್ಟಿದ್ದ ಕಾಗದ ಪತ್ರಗಳನ್ನು ಚೆಲ್ಲಾಪಿಲ್ಲಿ ಮಾಡಿ 32 ಸಾವಿರ ರೂ. ಹಣ, 200 ಗ್ರಾಂ ತೂಕದ ಬೆಳ್ಳಿ ಸರ ಮತ್ತು ಪದಕ (45 ಸಾವಿರ ರೂ. ಮೌಲ್ಯ) ಹಾಗು 12 ಸಾವಿರ ರೂ. ಬೆಲೆಯ ಟಿವಿ ಕಳವು ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವರದಕ್ಷಿಣೆ ಕಿರುಕುಳ: ಗೃಹಿಣಿ ಆತ್ಮಹತ್ಯೆ

**ಹೊಳೆನರಸೀಪುರ:** ಪ್ರೀತಿಸಿ ಮದುವೆಯಾಗಿದ್ದರೂ ಗಂಡನ ವರದಕ್ಷಿಣೆ ಕಿರುಕುಳದ ಹಿಂಸೆ ತಾಳಲಾರದೆ ಗೃಹಿಣಿಯೊಬ್ಬರು ಕಲ್ಯಾಣಿಯಲ್ಲಿ ಬಿದ್ದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಸಿಗರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಹಳೇಕೋಟೆ ಹೋಬಳಿ ಸಬ್ಬನಹಳ್ಳಿ ಗ್ರಾಮದ ಅನುಸೂಯ-ಕುಮಾರ ಅವರ ಪುತ್ರಿ ಎಸ್.ಕೆ.ಭವ್ಯ ಮೃತರು. ಸಿಗರನಹಳ್ಳಿ ಗ್ರಾಮದ ರಂಗಸ್ವಾಮಿ ಮತ್ತು ಭ್ಯಾಗ್ಯಮ್ಮ ಅವರ ಮಗ ಎಸ್.ಆರ್.ಶಿವರಾಜು ಅವರೊಂದಿಗೆ 4 ವರ್ಷಗಳ ಹಿಂದೆ ಪ್ರೀತಿಸಿ ಮದುವೆ ಯಾಗಿದ್ದರು. ದಂಪತಿಗೆ ಎರಡೂವರೆ ವರ್ಷದ ಹೆಣ್ಣು ಮಗುವಿದೆ. ಇತ್ತೀಚೆಗೆ ದಾಂಪತ್ಯದಲ್ಲಿ ವಿರಸ ಉಂಟಾಗಿ ತವರು ಮನೆಯಿಂದ ವರದಕ್ಷಿಣೆ ತರುವಂತೆ ಶಿವರಾಜು ಕಿರುಕುಳ ನೀಡುತ್ತಿದ್ದ. ಈ ಸಂಬಂಧ ಹಲವು ಬಾರಿ ಸಂಧಾನ ಮಾಡಲಾಗಿತ್ತು. ಏ.16ರಂದು ಮದ್ಯದ ಅಮಲಿನಲ್ಲಿ ಶಿವರಾಜು ಹೆಂಡತಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎನ್ನಲಾಗಿದೆ. ಮನನೊಂದ ಅವರು ಗ್ರಾಮದ ಕಲ್ಯಾಣಿಗೆ ಬಿದ್ದು ಸಾವನ್ನಪ್ಪಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕಾರು ಡಿಕ್ಕಿ : ಸ್ಕೂಟರ್ ಸವಾರ ಸಾವು

**ಹಾಸನ:** ಕಾರು ಡಿಕ್ಕಿಯಾಗಿ ಸ್ಕೂಟರ್ ಸವಾರ ಮೃತಪಟ್ಟಿರುವ ಘಟನೆ ಶಾಂತಿಗ್ರಾಮ ಹೋಬಳಿ ಕಂಚನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗಾಣಿಗರಹೊಸಳ್ಳಿ ಗ್ರಾಮದ ಕುಮಾರ್ ಮೃತರು. ಏ.18ರ ಸಂಜೆ 5 ಗಂಟೆ ಸಮಯದಲ್ಲಿ ಸ್ಕೂಟರ್‌ನಲ್ಲಿ ಕೊಂತಗೊಡನಹಳ್ಳಿಗೆ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಕುಮಾರ್ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 2027ಕ್ಕೆ ಮಲೇರಿಯಾ ಮುಕ್ತ ಜಿಲ್ಲೆ ಗುರಿ

» **ಮೊದಲನೇ ಪುಟದಿಂದ**

ಪರಿಶೀಲನೆ ಮತ್ತು ಮಲೇರಿಯಾ ಸಕ್ರಿಯ ಮತ್ತು ಸ್ಥಿತ ರಕ್ತ ಲೇಪನ ಸಂಗ್ರಹಣೆ ವರದಿಯನ್ನು ಐಹೆಚ್‌ಐಪಿ ಪೋರ್ಟಲ್‌ನಲ್ಲಿ ಸಮರ್ಪಕವಾಗಿ ಅಂಕಿ ಅಂಶವನ್ನು ವರದಿ ಮಾಡಿರುವ ಹಾಗು ರಾಷ್ಟ್ರೀಯ ಕಾರ್ಯಕ್ರಮವಾದ ಮಲೇರಿಯಾಕ್ಕೆ ಅನುಗುಣವಾಗಿ ಜಿಲ್ಲೆಯಲ್ಲಿ ಪರಿಶೀಲನೆ ಮಾಡಿ ಜಿಲ್ಲೆಯನ್ನು ಮಲೇರಿಯಾ ಮುಕ್ತ ಜಿಲ್ಲೆ ಎಂದು ಘೋಷಣೆ ಮಾಡಿ ಜಿಲ್ಲೆಗೆ ಕೇಂದ್ರ ಮಟ್ಟದಿಂದ ಮಲೇರಿಯಾ ಮುಕ್ತ ಜಿಲ್ಲೆ ಎಂದು ಘೋಷಣೆ ಪ್ರಮಾಣ ಪತ್ರವನ್ನು ವಿತರಣೆ ಮಾಡುವ ಸಲುವಾಗಿ ಮಲೇರಿಯಾ ಕೇಂದ್ರ ತಂಡವು ಜಿಲ್ಲೆಗೆ ಆಗಮಿಸಿದೆ.

ಹೊರ ರಾಜ್ಯಗಳಿಂದ ಬರುವ ವಲಸೆ ಜನರ ಹಾಗು ಈ ಜಿಲ್ಲೆಯಿಂದ ಸಮಸ್ಯಾತ್ಮಕ ಪ್ರದೇಶಗಳಿಗೆ ಹೋಗಿ ಬಂದವರ ರಕ್ತಲೇಪನ ಪರೀಕ್ಷೆ ಮಾಡಲಾಗುತ್ತದೆ. ಮಲೇರಿಯಾ ಪತ್ತೆಯಾದರೆ ಕೂಡಲೇ ಅವರಿಗೆ ಚಿಕಿತ್ಸೆ ನೀಡಲಾಗುತ್ತದೆ. ಮಲೇರಿಯಾ ಹರಡುವ ಅನಾಫಿಲಿಸ್ ಸೊಳ್ಳೆ ಬೆಳೆಯುವ ನೀರಿನ ತಾಣಗಳಾದ ಕೆರೆ, ಕಟ್ಟೆ, ಹಳ್ಳ, ಬಾವಿ ಇತ್ಯಾದಿ ಕಡೆ ಲಾರ್ವಾಹಾರಿ ಮೀನುಗಳಾದ ಗಪ್ಪಿ ಮತ್ತು ಗ್ಯಾಂಬೂಷಿಯಾವನ್ನು ಬಿಡಲಾಗಿದೆ. ಅದರಿಂದ ಆ ಮೀನುಗಳು ತಿಂದು ಅನಾಫಿಲಿಸ್ ಸೊಳ್ಳೆಗಳು ಬೆಳೆಯದಂತೆ ನೋಡಿಕೊಳ್ಳುತ್ತವೆ.

ಯಾವುದೇ ಜ್ವರವಿರಲಿ ರಕ್ತ ಪರೀಕ್ಷೆ ಮಾಡಿಸಿಕೊಳ್ಳಿ ಮಲೇರಿಯಾ ಇರಬಹುದೆಂಬುದು ಕಾರ್ಯಕ್ರಮದ ಘೋಷಣೆಯಾಗಿದ್ದು, ಸಾರ್ವಜನಿಕರು ಮಲೇರಿಯಾ ನಿಯಂತ್ರಣ ಹಾಗು ಜಿಲ್ಲೆಯಲ್ಲಿ ಮಲೇರಿಯಾ ನಿವಾರಣಾ ಗುರಿ ತಲುಪಲು ಸಹಕರಿಸಲು ತಂಡ ಕೋರಿದೆ.

# ಅಮೇರಿಕಾ -ಇರಾನ್ ನಡುವಿನ ಮಾತುಕತೆ ವಿಳಂಬ

• ಪ್ರಜೋದಯ ವರದಿ


**ನವದೆಹಲಿ :** ಅಮೇರಿಕಾ ಮತ್ತು ಇರಾನ್ ನಡುವಿನ ನಡೆಯುತ್ತಿರುವ ಮಾತುಕತೆ ಗಳ ಲ್ಲಿ ಕೆಲವು ಪ್ರಗತಿ ಕಂಡು ಬಂದಿದ್ದರೂ, ಅಂತಿಮ ಒಪ್ಪಂದಕ್ಕೆ ಇನ್ನೂ ಬಹಳ ದೂರವಿದೆ ಎಂದು ಇರಾನ್ ಸಂಸತ್ ಸ್ಪೀಕರ್ ತಿಳಿಸಿದ್ದಾರೆ.

ರಾಜ್ಯ ದೂರದರ್ಶನಕ್ಕೆ ನೀಡಿದ ಸಂದರ್ಶನದಲ್ಲಿ ಅವರು, ಮಾತುಕತೆಗಳಲ್ಲಿ ಹಲವಾರು ಅಂತರಗಳು ಇನ್ನೂ ಉಳಿ ದಿವೆ ಎಂದು ಹೇಳಿ, ಅಂತಿಮ ಷರತ್ತುಗಳ ಬಗ್ಗೆ ಚರ್ಚಿಸುವ ಹಂತಕ್ಕೂ ಇನ್ನೂ ತಲುಪಿಲ್ಲವೆಂದು ಸ್ಪಷ್ಟಪಡಿಸಿದರು.

ಈ ಮಧ್ಯೆ, ಅಮೇರಿಕಾ ನೌಕಾಪಡೆ ಇರಾನ್ ಬಂದರುಗಳ ಮೇಲೆ ನಿರ್ಬಂಧ ಮುಂದುವರಿಸುತ್ತಿರುವ ಹಿನ್ನಲೆಯಲ್ಲಿ, ಇರಾನ್ ಮತ್ತೆ ಹೊರ್ಮುಜ್ ಮೂಲಕ ಸಾಗುವ ಹಡಗುಗಳ ಮೇಲೆ ನಿಯಂತ್ರಣ ಕಠಿಣಗೊಳಿಸಿದೆ. ಕೆಲವು ಹಡಗುಗಳಿಗೆ ಸುರಕ್ಷಿತ ಸಂಚಾರಕ್ಕಾಗಿ ಶುಲ್ಕ ವಿಧಿಸುವ ಪ್ರಸ್ತಾಪವೂ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಈ ಕ್ರಮವು ಮಾತುಕತೆಗಳನ್ನು ಇನ್ನಷ್ಟು ಸಂಕೀರ್ಣಗೊಳಿಸಿದ್ದರೂ, ಗಲಿಬಾಫ್ ಇದನ್ನು ತಂತ್ರಾತ್ಮಕ ಜಯವೆಂದು ವಿವರಿ ಸಿದ್ದಾರೆ. ಶತ್ರುವನ್ನು ಸಂಪೂರ್ಣ ವಾಗಿ ಸೋಲಿಸಿಲ್ಲ, ಆದರೆ ತಂತ್ರದ ಮಟ್ಟದಲ್ಲಿ ನಾವು ಮೇಲುಗೈ ಸಾಧಿಸಿದ್ದೇವೆ ಎಂದುರು.

ಇದೀಗ ಎರಡು ದೇಶಗಳ ನಡುವೆ ಘೋಷಿಸಲಾದ ಎರಡು ವಾರಗಳ ಯುದ್ಧ



ವಿರಾಮ ಬುಧವಾರಕ್ಕೆ ಮುಕ್ತಾಯವಾಗಲಿದ್ದು, ಅದನ್ನು ವಿಸ್ತರಿಸುವ ಬಗ್ಗೆ ಅನುಮಾನ ಮುಂದುವರಿದಿದೆ. ಶಾಂತಿ ಮಾತುಕತೆಗಳಿಗೆ ಅವಕಾಶ ಕಲ್ಪಿ ಸಲು ಈ ವಿರಾಮ ಜಾರಿಗೆ ತರಲಾಗಿತ್ತು.

ಜಾಗತಿಕ ತೈಲ ಸರಬರಾಜಿಗೆ ಪ್ರಮುಖ ಮಾರ್ಗವಾಗಿರುವ ಹೊರ್ಮುಜ್ ಸಮುದ್ರ ಮಾರ್ಗವು ಈ ಸಂಘರ್ಷದಲ್ಲಿ ಪ್ರಮುಖ ಕೇಂದ್ರೀಯ ಬಿಂದುವಾಗಿ ಹೊರಹೊಮ್ಮಿದ್ದು, ಇದರ ಮೇಲಿನ ನಿರ್ಬಂಧಗಳು ಜಾಗತಿಕ ವಾಣಿಜ್ಯ ಮತ್ತು ಇಂಧನ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಇದಾದರೂ, ಇರಾನ್ ಅಧಿಕಾರಿಗಳು ಮಾತುಕತೆ ಮುಂದುವರಿಸಲು ಸಿದ್ಧರಾಗಿದ್ದಾರೆಂದು ಹೇಳಿದರೂ, ಪ್ರಸ್ತುತ ಪರಿಸ್ಥಿತಿಯಲ್ಲಿ ಅಂತಿಮ ಒಪ್ಪಂದ ಸಾಧ್ಯತೆ ದೂರದಲ್ಲೇ ಉಳಿದಿದೆ.

**ಮತ್ತೆ ಹೆಚ್ಚಿರುವ ಉದ್ವಿಗ್ನತೆ: ಆತಂಕ**

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಶಮನವಾಯಿತು ಎನ್ನುವಾಗಲೇ ಮತ್ತೆ ಉದ್ವಿಗ್ನಗೊಳ್ಳುವ ಸಾಧ್ಯತೆ ಕಂಡು ಬಂದಿದೆ. ವಾಯುಪಡೆ ಮತ್ತು ಕ್ಷಿಪಣಿ ಸಾಮರ್ಥ್ಯ ದುರ್ಬಲಗೊಳಿಸುವ ಪ್ರಯತ್ನ, ನೌಕಾಪಡೆ ನಾಶಮಾಡುವುದು, ಭೂಸೇನೆ ಮೂಲಕ ದಾಳಿ ನಡೆಸುವುದು ಹಾಗೂ ಹೊರ್ಮುಜ್ ಜಲಸಂಧಿಯನ್ನು ತೆರೆಯುವುದು ಮತ್ತಷ್ಟು ಸಮಸ್ಯೆಗೆ ಎಡೆ ಮಾಡಿಕೊಟ್ಟಿದೆ.

ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಘಾಲಿಬಾಫ್ ಪ್ರತಿಕ್ರಿಯಿಸಿ ಶತ್ರುಗಳ ಯಾವುದೇ ಉದ್ದೇಶ ಈಡೇರಿಲ್ಲ. ಅಮೇರಿಕಾದೊಂದಿಗೆ ಕೆಲವು ವಿಷಯಗಳಲ್ಲಿ ಒಮ್ಮತಕ್ಕೆ ಬರಲಾಗಿದ್ದರೂ, ಇನ್ನೂ ಹಲವು ವಿಷಯಗಳಲ್ಲಿ ಪ್ರಮುಖ ವ್ಯತ್ಯಾಸಗಳು ಉಳಿದಿವೆ ಎಂದು ಹೇಳಿದ್ದಾರೆ.

ಎಚ್ಚರಿಕೆ ನೀಡುವ ಮೂಲಕ ಮತ್ತು ಗಡುವನ್ನು ನಿಗದಿಪಡಿಸುವ ಮೂಲಕ ತನ್ನ ಗುರಿಗಳನ್ನು ಸಾಧಿಸಲು ಶತ್ರುವಿಗೆ ಸಾಧ್ಯವಾಗಿಲ್ಲ. ಆದ್ದರಿಂದ, ಮಧ್ಯವರ್ತಿಗಳ ಮೂಲಕ ಸಂದೇಶಗಳನ್ನು ಕಳುಹಿಸಲು ಪ್ರಾರಂಭಿಸಿದೆ ಎಂದು ಅವರು ಹೇಳಿದ್ದಾರೆ.

ಅಮೇರಿಕಾ ತನ್ನ ಬೇಡಿಕೆಗಳನ್ನು ಪೂರೈಸಲು ಇರಾನ್ ತಾತ್ಕಾಲಿಕ ಕದನ ವಿರಾಮಕ್ಕೆ ಒಪ್ಪಿಕೊಂಡಿದೆ ಎಂದ ಅವರು, ನಾವು ಯುದ್ಧಭೂಮಿಯಲ್ಲಿ ವಿಜಯಶಾಲಿಗಳು ಎಂಬುದನ್ನು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಪ್ಪಿಕೊಂಡಿದ್ದಾರೆಂದು ಹೇಳಿದ್ದಾರೆ.

## ತೃತೀಯ ಭಾಷೆ ವಿವಾದ : ಸಿಎಂ ಸಲಹೆ ಪಡೆಯಲು ಸಚಿವ ಮಧು ಬಂಗಾರಪ್ಪ ಮುಂದು

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆ ಅಂಕ/ಗ್ರೇಡ್ ವ್ಯವಸ್ಥೆ ಕುರಿತು ಉಂಟಾಗಿರುವ ವಿವಾದಕ್ಕೆ ಸಂಬಂಧಿಸಿ ಹೈಕೋರ್ಟ್ ನೀಡಿರುವ ಆದೇಶ ಕುರಿತು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ತೃತೀಯ ಭಾಷೆ ವಿಷಯದಲ್ಲಿ ಈಗಿನ ವ್ಯವಸ್ಥೆಯನ್ನು ಬದಲಾಯಿಸಬಾರದು ಹಾಗೂ ಅಂಕಗಳನ್ನು ಮುಂದುವರೆಸಬೇಕೆಂದು ಆದೇಶಿಸಿದೆ. ಈ ಹಿನ್ನಲೆಯಲ್ಲಿ ಪ್ರತಿಕ್ರಿಯೆ ನೀಡಿರುವ ಮಧು ಬಂಗಾರಪ್ಪ ಅವರು, ಸರ್ಕಾರ ಕಾನೂನು ಸಲಹೆ ಪಡೆದು ಮುಂದಿನ ಕ್ರಮ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ 1 ಫಲಿತಾಂಶಗಳನ್ನು ವಿಳಂಬ ಮಾಡದೇ ಹೊರತರುವುದು ಸರ್ಕಾರದ ಆದ್ಯತೆಯಾಗಿದೆ. ಆದ್ದರಿಂದ ಈ ವಿಚಾರವನ್ನು ದೀರ್ಘಗೊಳಿಸುವುದಿಲ್ಲ. ಕಾನೂನು ಸಲಹೆಗಾರರ ಅಭಿಪ್ರಾಯ ಪಡೆದು ಮುಂದಿನ ನಿರ್ಧಾರ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ.

ಇದೇ ವೇಳೆ, ಈಗಾಗಲೇ ಪ್ರಕಟಿಸಿದ್ದ ಕರಡು ಅಧಿಸೂಚನೆಯನ್ನು ಹಿಂಪಡೆಯಲಾಗುವುದಿಲ್ಲ. ಜನರಿಂದ ಸಲಹೆ ಪಡೆಯಲು ಅದನ್ನು ಪ್ರಕಟಿಸಲಾಗಿತ್ತು. ಹೈಕೋರ್ಟ್ ಕೂಡ ಪರೀಕ್ಷೆ ಆರಂಭಕ್ಕೂ ಮುನ್ನ ಇದ್ದ ನಿಯಮಗಳನ್ನೇ ಅನುಸರಿಸಬೇಕು ಮತ್ತು ಮಧ್ಯದಲ್ಲಿ ಬದಲಾವಣೆ ಮಾಡಬಾರದು ಎಂದು ಹೇಳಿದೆ. ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕಗಳ ಬದಲು ಎ, ಬಿ, ಸಿ ಗ್ರೇಡ್ ನೀಡುವ ಕುರಿತು ಶಿಕ್ಷಣ ಇಲಾಖೆ ಮೊದಲು ಕರಡು ಪ್ರಕಟಿಸಿತ್ತು. ಇದರಿಂದ ಒಟ್ಟು ಅಂಕಗಳನ್ನು 625ರಿಂದ 525ಕ್ಕೆ ಇಳಿಸುವ ಯೋಜನೆ ಕೂಡ ಘೋಷಿಸಲಾಗಿತ್ತು. ಕನ್ನಡ ಪರ ಸಂಘಟನೆಗಳ ಮನವಿಯ ಹಿನ್ನೆಲೆಯಲ್ಲಿ ಹಿಂದಿ ಭಾಷಾ ಪರೀಕ್ಷೆ ರದ್ದುಗೊಳಿಸುವಂತೆ ಒತ್ತಾಯಗಳು ಕೇಳಿಬಂದಿದ್ದವು ಎಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019